# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

Nesaru **Tingalole** Vol XXIV - 9 ಸೆಪ್ಟೆಂಬರ್ 2006

Rs. 5/-



ಗೌರಿ ಗಣೇಶರಿಗೆ ಮೈಸೂರು ಅಸೋಸಿಯೇಷನ್‌ನ ಸದಸ್ಯರಿಂದ ಭಕ್ತಿ ಪೂರ್ವಕ ಭಜನೆ ಹಾಡುಗಳ ಕಾರ್ಯಕ್ರಮ

**The Mysore Association, Bombay**
393, Bhaudaji Road, Matunga, Mumbai - 400 019.
Phone : 2402 4647, 2403 7065 • Fax : 2401 0574
E-mail : karunadu@bom5.vsnl.net.in

ಅಸೋಸಿಯೇಷನ್ನಿನಲ್ಲಿ

# ಅಸೋಸಿಯೇಷನ್ನಿನಲ್ಲಿ ಸ್ವರ್ಣಗೌರಿ ಮತ್ತು ಗಣಪತಿ ಉತ್ಸವ

ಹೆಣ್ಣು ಮಕ್ಕಳಿಗೆ ಉತ್ಸವ ಗೌರಿ ಹಬ್ಬ ಎಂದರೆ ಬಹಳ ಸಂಭ್ರಮ ತೌರಿಗೆ ಹೋಗಲು ಒಂದು ಸಂದರ್ಭ, ಗೌರಿಯ ಪೂಜೆ ಮಾಡುವುದು ಒಂದು ಸಂಭ್ರಮ. ಭಾದ್ರಪದ ಶುದ್ಧ ತದಿಗೆಯಂದು ಸ್ವರ್ಣ ಗೌರಿಯ ಪೂಜೆಯನ್ನು ಆಚರಿಸಲಾಗುತ್ತದೆ.



ಗೌರಿ ಗಣೇಶ ಉತ್ಸವದ ಪೂಜಾ ಕಾರ್ಯವನ್ನು ನಡೆಸಿಕೊಟ್ಟ ಶ್ರೀಮತಿ ಸುಧಾ ಮತ್ತು ಶ್ರೀ ಶ್ರೀನಿವಾಸರಾವ್ ದಂಪತಿ.

ಮೈಸೂರು ಅಸೋಸಿಯೇಷನ್ನಿನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆ ಜೊತೆಗೆ ಸಾಂಪ್ರದಾಯಿಕ ವಿಧಿಗಳನ್ನು ನಡೆಸಿಕೊಂಡು ಬಂದಿದ್ದಾರೆ. ಉದಾ: ಅಕ್ಷ ತೃತೀಯಾ, ಮಾಘಿ ಗಣಪತಿ, ಮಹಾನವಮಿ ಮೊದಲಾದದ್ದು, ಸ್ವರ್ಣಗೌರಿ ಹಾಗೂ ಗಣೇಸನ ಪೂಜೆಯನ್ನು ಹೆಚ್ಚು ವಿಶೇಷವಾಗಿ ಆಚರಿಸಲಾಗುತ್ತದೆ. ಈ ವರ್ಷ ಆಗಸ್ಟ್ 26ರಂದು ಸ್ವರ್ಣ ಗೌರಿಯ ಪೂಜೆ, ಹಿಂದಿನ ದಿನವೇ ನಮ್ಮ ಕು. ಪ್ರೀತಿ, ಕು. ಶೀಲಾ ಹಾಗು ಉದಯ ಎಲ್ಲರೂ ಸೇರಿ ಗೌರಮ್ಮನಿಗೆ ಸೀರೆಯುಡಿಸಿ ಅಲಂಕಾರ ಮಾಡಿದರು. ಶನಿವಾರ 26ರಂದು ಬೆಳಿಗ್ಗೆ 10 ಗಂಟೆಗೆ ಪೂಜೆ ಆರಂಭವಾಯಿತು. ಹನುಮಾನ್ ಶಾಸ್ತ್ರಿಗಳು ವಿಧಿವತ್ತಾಗಿ ಹಾಗೂ ಸಾಂಗವಾಗಿ ಪೂಜೆಯನ್ನು ಮಾಡಿಸಿದರು. ಎಲ್ಲರೂ ಗೌರಿಗೆ ಪೂಜೆ ಮಾಡಿ ದಾರವನ್ನು ಕಟ್ಟಿಕೊಂಡು ಗೌರಿಗೆ ಮರದ ಬಾಗಿನ ಕೊಟ್ಟು ಅಡಕೆಲೆಗಳನ್ನು ವಿನಿಮಯ ಮಾಡಿಕೊಂಡು ರಾಘುವಿನ ಕೈನ ಸವಿಯಾದ ಅಡಿಗೆಯನ್ನು ಊಟ ಮಾಡಿ ಮನೆಗಳಿಗೆ ತೆರಳಿದರು.

ಮಾರನೆಯ ದಿನ 27, ಭಾನುವಾರದಂದು ಗಣೇಶ ಚತುರ್ಥಿ, ಅಂದು ಬೆಳಿಗ್ಗೆ 10 ಘಂಟೆಗೆ ಗಣಪತಿಯ ಪೂಜೆ ಆರಂಭವಾಯಿತು. ಸದಸ್ಯರಾದ ಶ್ರೀ ಕೆ. ಎಸ್. ಶ್ರೀನಿವಾಸ್ ಹಾಗೂ ಶ್ರೀಮತಿ ಸುಧಾ ಶ್ರೀನಿವಾಸ್ ಅವರು ಕುಳಿತು ಪೂಜೆ ಮಾಡಿದರು. ಹನುಮಾನ್ ಶಾಸ್ತ್ರಿಗಳ ನೇತೃತ್ವದಲ್ಲಿ ಗಣಪತಿಗೆ ಅರ್ಚನೆ, ಅಷ್ಟೋತ್ತರ, ಪಂಚಾಮೃತ ಅಭಿಷೇಕ, ನೈವೇದ್ಯ ಮಹಾಮಂಗಳಾರತಿ ಎಲ್ಲವನ್ನು ಮಾಡಿ ಪ್ರಸಾದ ವಿನಿಯೋಗದೊಂದಿಗೆ ಕಾರ್ಯಕ್ರಮ




ಗಣೇಶೋತ್ಸವದಂದು ಪೂಜೆಗೊಂಡ ಮಹಾಗಣಪತಿ ಮೂರ್ತಿ

ಮುಕ್ತಾಯವಾಯಿತು.

ಮಾರನೆಯ ದಿನ ಸೋಮವಾರ 28ರಿಂದ ಸಂಜೆಯ ಹೊತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನೇರ್ಪ ಡಿಸಲಾಗಿತ್ತು. ಯುವ ಕಲಾವಿದರಿಗೆ ಪ್ರೋತ್ಸಾಹ ಕೊಡುವ ಅಂಗವಾಗಿ ಅನೇಕ ವರ್ಷಗಳಿಂದ ಯುವ ಕಲಾವಿದರಿಂದಲೇ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಮೊದಲನೆಯ ದಿನ ಮಾ|| ಕಾರ್ತಿಕ್ ಸುರೇಶ್ ಅವರ ಸಂಗೀತ ಕಾರ್ಯಕ್ರಮ, ಸುರೇಶ್ ಅವರು ಹಿರಿಯ ಗಾಯಕಿ ಶ್ರೀಮತಿ ಪಲ್ಲವಿ ವಿಜಯ ಲಕ್ಷ್ಮೀನಾಥನ್ ಅವರ ಶಿಷ್ಯ. ಶ್ರೀಮತಿ ಲಕ್ಷ್ಮೀ ಸೀತಾರಾಂ ಅವರು ಕಲಾವಿದರನ್ನು ಪರಿಚಯ ಮಾಡಿಕೊಟ್ಟರು. ನಂತರ ಶ್ರೀಮತಿ ವಿಜಯ ಲಕ್ಷ್ಮೀನಾಥ್‌ನ್ ಅವರು ಕಲಾವಿದರನ್ನು ಪುಷ್ಪಗುಚ್ಛವನ್ನಿತ್ತು ಗೌರವಿಸಿದ ನಂತರ ಸಂಗೀತ




ಗೌರಿ ಗಣೇಶೋತ್ಸವದ ಅಂಗವಾಗಿ ನಡೆದ ಯುವಪ್ರತಿಭೆಯ ಕಾರ್ಯಕ್ರಮದ ಮೊದಲ ದಿನ ಶ್ರೀ ಕಾರ್ತಿಕ್ ಸುರೇಶ್ ಅವರ ಹಾಡುಗಾರಿಕೆ. ಪಕ್ಕವಾದ್ಯದಲ್ಲಿ ಶ್ರೀ ತೇಜಸ್ವಿ ಸುಂದರ ರಾಜನ್ - ಪಿಟೀಲು ಮತ್ತು ಆದಿತ್ಯ ರಾಜಗೋಪಾಲನ್ - ಮೃದಂಗ




ಕುಮಾರಿ ಸಂಧ್ಯ ಮತ್ತು ಕುಮಾರಿ ಶೋಭಾನರವರಿಂದ ಗಾಯನ ಕಾರ್ಯಕ್ರಮ ಪಿಟೀಲಿನಲ್ಲಿ ಸ್ಮೃತಿ ಸುಂದರ ರಾಜನ್, ಮೃದಂಗದಲ್ಲಿ ಆದಿತ್ಯ ರಾಜಗೋಪಾಲನ್



ಅರುಣಾ ದುರ್ವಿ ಅವರ ಗಾಯನಕ್ಕೆ ಅಪೂರ್ವ ಸ್ವಾಮಿನಾಥನ್ ಅವರಿಂದ - ಪಿಟೀಲು ಮತ್ತು ರಮಣನ್ ಅವರಿಂದ - ಮೃದಂಗ ವಾದನ




ಕುಮಾರಿ ಉಜ್ವಲ ಆಚಾರ್ಯ ಮತ್ತು ವೃಂದದಿಂದ ಸುಗಮ ಸಂಗೀತ ಕಾರ್ಯಕ್ರಮ

ಕಾರ್ಯಕ್ರಮವು ಆರಂಭವಾಯಿತು. ಸುರೇಶ್ ಅವರು ''ಚಾಲಮೆ... ಎಂಬ ವರ್ಣದಿಂದ ಆರಂಭಿಸಿದರು. ನಂತರ ''ವಲ್ಲಭ... ಎಂಬ ದೀಕ್ಷಿತರ ಕೃತಿ ಶಂಕರಾಭರಣದಲ್ಲಿ, ಹಿಂದೋಳ ರಾಗದಲ್ಲಿ ಸರಸ್ವತಿಯನ್ನು ಕುರಿತು ''ಮಾಮವತು ಶ್ರೀ ಸರಸ್ವತಿ..., ಕಲ್ಯಾಣಿ ರಾಗದಲ್ಲಿ'' ನಿಧಿ ಚಾಲ ಸುಖಮಾ.... ಎಂಬ ಕೃತಿಯಲ್ಲಿ ಸ್ವರ ವಿಸ್ತಾರ ಮಾಡಿ, ತನಿಗೆ ಅವಕಾಶ ಕೊಟ್ಟರು. ಪುರಂದರದಾಸರ ಎರಡು ಕೃತಿಗಳು, ಎಲ್ಲವೂ ಶ್ರೋತೃಗಳಿಗೆ ಮೆಚ್ಚುಗೆಯಾಯಿತು. ಸುರೇಶ್‌ಗೆ ಪಿಟೀಲಿನಲ್ಲಿ ತೇಜಸ್ವಿ ಸುಂದರರಾಜ್ ಹಾಗೂ ಮೃದಂಗದಲ್ಲಿ ಆದಿತ್ಯ ರಾಜಗೋಪಾಲ್ ನೆರವು ನೀಡಿ ಹೆಚ್ಚು ಕಳೆಯನ್ನು ಕೊಟ್ಟರು.

ಮಂಗಳವಾರ 29ರಂದು ಮಾ. ವಿಘ್ನೇಶ್ ಈಶ್ವರ್ ಅವರ ಕರ್ನಾಟಕ ಸಂಗೀತ, ವಿಘ್ನೇಶ್ ಈಶ್ವರ್ ಅವರು ಶೃಂಗೇರಿ ಮಠದ ಆಸ್ಥಾನ ವಿದ್ವಾನ್ ಶ್ರೀ ಅನಂತರಾಮ ಭಾಗವತರ್ ಅವರಲ್ಲಿ 13 ವರ್ಷಗಳಿಂದ ಸಂಗೀತವನ್ನು ಕಲಿಯುತ್ತಿದ್ದಾರೆ. ಕಲಾವಿದರನ್ನು ಪರಿಚಯಿಸಿದ ನಂತರ ಶ್ರೀ ವಸಂತ್ ಅವರು ಪುಷ್ಪ ಗುಚ್ಛಗಳನ್ನು ನೀಡಿ ಗೌರವಿಸಿದ ನಂತರ ಕಾರ್ಯಕ್ರಮ ಆರಂಭವಾಯಿತು. ''ಕರುಣಿಸು ಗಜವದನ'' ಎಂಬ ಕೃತಿಯಿಂದ ಆರಂಭವಾಯಿತು. ಹೆಚ್ಚಾಗಿ ಗಣಪತಿಯನ್ನು ಕುರಿತೇ ಹಾಡಿದರು, ಹೆಚ್ಚಾಗಿ ಗಣಪತಿಯನ್ನು ಕುರಿತೇ ಹಾಡಿದರು. ''ವರಸಿದ್ಧಿ ವಿನಾಯಕ....'' ''ಶ್ರೀ ಮಹಾ ಗಣಪತಿ...'' ''ವಂದಿಸುವುದಾದಿಯಲಿ...'' ಅವರ ಗುರುಗಳ ವಿರಚಿತ ಕೃತಿ ''ಮಧುರ ಭಾಷಿಣಿ ಶಾರದೆ.... ಕುಂಚಭವಪ್ರಿಯರಾಗ ಎಲ್ಲರಿಗೂ ಬಹಳ ಮೆಚ್ಚುಗೆಯಾಯಿತು. ಪುರಂದರದಾಸರ 2-3 ಕೃತಿಗಳನ್ನು ಹಾಡಿದರು. ಇವರಿಗೆ ಸಹಾಯಕರಾಗಿ ಪಿಟೀಲಿನಲ್ಲಿ ಶ್ರೀಮತಿ ಮಂಗಳಾ ವೈದ್ಯನಾಥನ್ ಹಾಗೂ ಮೃದಂಗದಲ್ಲಿ 'ಹರೀಶ್ ತ್ಯಾಗರಾಜನ್ ನೆರವಾದರು.


ಬುಧವಾರ ತಾ. 30ರಂದು ಮೂರನೇ ದಿನದ ಸಂಗೀತ ಕಾರ್ಯಕ್ರಮ ಶ್ರೀ ಗೋವಿಂದ್ ಬಿ. ಅವರಿಂದ ನಡೆಯಿತು. ಶ್ರೀ ಗೋವಿಂದ್ ತಮ್ಮ 7ನೆಯ ವಯಸ್ಸಿನಿಂದಲೇ ಸಂಗೀತಾಭ್ಯಾಸ ಮಾಡುತ್ತಿದ್ದಾರೆ. ಪ್ರಾರಂಭದಲ್ಲಿ ಎರಡು ವರ್ಷ ಶ್ರೀಮತಿ ಮೈಥಿಸಿ



ಬೆಂಗಳೂರಿನ ಕಲಾವಿದ ಕೇಶವ ಪ್ರಸಾದವರಿಂದ ಸ್ಯಾಕ್ಸೋಫೋನ್ ವಾದನ, ಶ್ರೀಮತಿ ಮಂಗಳ ವೈದ್ಯನಾಥನ್ ಅವರಿಂದ ಪಿಟೀಲು ಮತ್ತು ಶ್ರೀ ದೇವಾನಂದ ಮೆನನ್ ಅವರಿಂದ ಮೃದಂಗದಲ್ಲಿ ಪಕ್ಕವಾದ್ಯ ಸಹಕಾರ



ಶ್ರೀ ಗೋವಿಂದ್ ಅವರ ಗಾಯನಕ್ಕೆ ಶ್ರೀಕಾಂತ್ ಅವರಿಂದ ಪಿಟೀಲು ಮತ್ತು ಕಾರ್ತಿಕ್ ಶ್ರೀನಿವಾಸನ್ ಅವರಿಂದ ಮೃದಂಗ ವಾದನ.




ಶ್ರೀ ವಿಘ್ನೇಶ್ ಈಶ್ವರ್‌ರವರ ಸಂಗೀತಕ್ಕೆ ಶ್ರೀಮತಿ ಮಂಗಳಾ ವೈದ್ಯನಾಥನ್ ಅವರಿಂದ - ಪಿಟೀಲು ಮತ್ತು ಹರೀಶ್ ತ್ಯಾಗರಾಜರಿಂದ - ಮೃದಂಗ ವಾದನ



ಯುವ ಪ್ರತಿಭೆ ಉಜ್ವಲ ಆಚಾರ್ಯ ಅವರಿಗೆ ವೈಣಿಕ ವಿದ್ವಾನ್ ಹಿರಿಯ ಕಲಾವಿದ ಶ್ರೀ ಸಿ.ಕೆ. ಶಂಕರನಾರಾಯಣ ಅವರಿಂದ ಉತ್ತೇಜನ ವಚನಗಳು.

ಕೇಶವನ್ ಅವರಲ್ಲಿ ಪ್ರಾಥಮಿಕ ಅಭ್ಯಾಸವನ್ನು ಮಾಡಿ ಮುಂದೆ 9 ವರ್ಷಗಳು ಶಣ್ಮುಖಾನಂದ ಸಭೆಯ ಫೈನ್ ಆರ್ಟ್ಸ್ ಸೊಸೈಟಿಯ ಗುರುಗಳಾದ ಶ್ರೀ. ವಿ. ಶ್ರೀರಾಮ್, ಶ್ರೀಮತಿ ಚೆಲ್ಲಾ ಕೃಷ್ಣಸ್ವಾಮಿ ಮತ್ತು ಚಂದ್ರಶೇಖರ ಭಾಗವತರ್ ಅವರಲ್ಲಿ ಸಂಗೀತಾಭ್ಯಾಸವನ್ನು ಮಾಡಿರುತ್ತಾರೆ. ತಮ್ಮ ಪದವಿಯ ಕೊನೆಯ ವರ್ಷದ ಅಭ್ಯಾಸವನ್ನು S.I.E.S. College of Commerceನಲ್ಲಿ ಮಾಡುತ್ತಿದ್ದಾರೆ.

ಮೊದಲಿಗೆ ಅವರು ಸ್ವಾಮಿ ನೀನೇ, ವಿನಾಯಕ ವಿನಾಶಕ ಮುಂತಾಗಿ ಅನೇಕ ಕೃತಿಗಳನ್ನು ಹಾಡಿ ಬಾಲಕೃಷ್ಣ ಬಾರೋ, ಎಂದ ದಾಸರ ಪದದಿಂದ ಅವರ ಸಂಗೀತ ಕಛೇರಿಯನ್ನು ಮುಕ್ತಾಯಗೊಳಿಸಿದರು. ಅವರಿಗೆ ಪಿಟೀಲಿನಲ್ಲಿ ಶ್ರೀ ಶ್ರೀಕಾಂತ್ ಹಾಗೂ ಮೃದಂಗದಲ್ಲಿ ಶ್ರೀ ಕಾರ್ತಿಕ್ ಶ್ರೀನಿವಾಸನ್ ಪಕ್ಕವಾದ್ಯವನ್ನೊದಗಿಸಿದರು. ಅಂದಿನ ಕಾರ್ಯಕ್ರಮವನ್ನು ಅಸೋಸಿಯೇಷನ್ ಸದಸ್ಯರಾದ ಶ್ರೀ ನಾಗಭೂಷಣ್ ರವರು ನಡೆಸಿಕೊಟ್ಟು, ಸಂಗೀತಗಾರರನ್ನು ಪರಿಚಯ ಮಾಡಿಸಿದರು.

31 ಗುರುವಾರದಂದು ಕು. ಸುಶೀಲಾ ರಾವ್ ಮತ್ತು ಕು. ಅರುಣ ಅವರ ಕರ್ನಾಟಕ ಸಂಗೀತ ಕಾರ್ಯಕ್ರಮವನ್ನೇರ್ಪಡಿಸಲಾಗಿತ್ತು. ಕಾರಣಾಂತರಿಂದ ಕು. ಸುಶೀಲಾ ಬರಲಾಗಲಿಲ್ಲ. ಕು. ಅರುಣ ಕಛೇರಿಯನ್ನು ನಡೆಸಿಕೊಟ್ಟರು. ಕು. ಅರುಣಾ ಡೊಂಬಿವಲಿಯ ಮೈಸೂರು ಸಂಗೀತ ವಿದ್ಯಾಲಯದ ಪ್ರಾಂಶುಪಾಲರಾದ ಶ್ರೀಮತಿ ಉಮಾ ನಾಗಭೂಷಣ್ ಅವರ ಶಿಷ್ಯೆ ಕಲಾವಿದರನ್ನು ಪರಿಚಯಿಸಿದ ನಂತರ ಅಸೋಸಿಯೇಷನ್ನಿನ ಹಿರಿಯ ಸದಸ್ಯೆ ಶ್ರೀಮತಿ ಶಾರದಮ್ಮ ನಾರಾಯಣ ಸ್ವಾಮಿ ಅವರು ಕಲಾವಿದರಿಗೆ ಪುಷ್ಪಗುಚ್ಛಗಳನ್ನು ನೀಡಿ ಗೌರವಿಸಿದರು. ನಂತರ ಕಾರ್ಯಕ್ರಮವು ಆರಂಭವಾಯಿತು. ವರ್ಣದಿಂದ ಕಛೇರಿಯು ಆರಂಭವಾಯಿತು. ನಂತರ ಜಯಚಾಮರಾಜ ಒಡೆಯರ ಕೃತಿ ''ಶ್ರೀ ಮಹಾಗಣಪತೆ...'' ಅಠಾಣ ರಾಗದಲ್ಲಿ ಹಾಡಿದರು., ನಂತರ ''ಮುತ್ತಯ್ಯ ಭಾಗವತರ'' ''ಮಧುಕೈಟಭ ಸಂಹಾರ'' ''ಆರಭಿಯಲ್ಲಿ, ಕಮಲ ಕೋಮಲ.. ಮರಾಠಿಯಲ್ಲಿ ಒಂದು ಅಭಂಗ್, ಇನ್ನೂ ಅನೇಕ ಕೃತಿಗಳನ್ನು ಹಾಡಿದರು. ಇವರೊಂದಿಗೆ ಪಿಟೀಲಿನಲ್ಲಿ ಕು. ಅಪೂರ್ವ ಸ್ವಾಮಿನಾಥನ್ ಹಾಗೂ ಮೃದಂಗದಲ್ಲಿ ಆರ್. ರಮಣನ್ ನೆರವಾದರು.

ಸೆಪ್ಟೆಂಬರ್ 1ರ ಶುಕ್ರವಾರದಂದು ಕು. ಸಂಧ್ಯಾ ಕು. ಶೋಭನ ಇವರ ಕಛೇರಿಯನ್ನು ಏರ್ಪಡಿಸಲಾಗಿತ್ತು ಕು. ಸಂಧ್ಯಾ ಮತ್ತು ಕು. ಶೋಭನಾ ಇವರು ಶ್ರೀಮತಿ ಜಯ ಸುಬ್ರಹ್ಮಣ್ಯಂ ಇವರಲ್ಲಿ ಸಂಗೀತಾ ಅಭ್ಯಾಸ ಮಾಡಿದ್ದಾರೆ. ಕಲಾವಿದರನ್ನು ಪರಿಚಯಿಸಿ ಪುಷ್ಪಾಗುಚ್ಛಗಳನ್ನು ನೀಡಿ ಗೌರವಿಸಿದ ನಂತರ ಕಚೇರಿ ಆರಂಭವಾಯಿತು. ಷಣ್ಮುಖನನ್ನು ಕುರಿತ ಒಂದು ಕೃತಿಯೊಡನೆ ಆರಂಭಿಸಿದರು. ನಂತರ 'ನಾಟಿ' ರಾಗದಲ್ಲಿ 'ಜಯಜಯಾ...., 'ಭಜ ಮಾನಸ...' ತ್ಯಾಗರಾಜರ ಕೃತಿ ''ಸಿದ್ಧಿ ವಿನಾಯಕಂ...'' ತ್ಯಾಗರಾಜರ ಕೃತಿ 'ಯೋಚನಾ ಕಮಲ...' ಪುರಂದರದಾಸರ 'ಜಗದೋದ್ಧಾರನ.., ' 'ನಾರಾಯಣ ನಿನ್ನ ನಾಮದ...' 'ಯಾದವ ನೀ ಬಾ... ಮೊದಲಾದ ಕೃತಿಗಳು, 'ನೀರಜ ಸಮ... ಎಂಬ ತಿಲ್ಲಾನ ನಂತರ ಒಂದು ತಮಿಳು ಕೃತಿ 'ಎನ್ನ ಕೊಲ್ಲಿಯ.... ಕಾನಡ ರಾಗದಲ್ಲಿ ಹಾಡಿದರು.



ಸ್ವರ್ಣಗೌರಿಯನ್ನು ಕಳಿಸಿಕೊಡುವ ಮೊದಲು ಸುವಾಸಿನಿಯವರು ಗೌರಮ್ಮನಿಗೆ ಸೋಭಲಕ್ಕಿ ನೀಡುತ್ತಿರುವುದು.



ಗೌರಿ ಗಣೇಶನ ಉತ್ಸವದ ಕೊನೆಯ ದಿನವಾದ ವಿಸರ್ಜನಾ ಪೂರ್ವ ಋತ್ವಿಕರಿಂದ ಆಶೀರ್ವಚನ



ಸಮುದ್ರ ತೀರದಲ್ಲಿ ಗೌರಿ ಗಣೇಶನಿಗೆ ಕೊನೆಯ ನಮನ

ಭದ್ರಾಚಲರಾ ಮದಾಸರ ಕೃತಿಯೊಂದಿಗೆ ಮಂಗಳ ಹಾಡಿದರು. ಪ್ರತಿಯೊಂದು ಕೃತಿಯೂ ಶ್ರೋತೃಗಳ ಮೆಚ್ಚುಗೆಯಾಯಿತು. ಇವರೊಂದಿಗೆ ಕು. ಸ್ಮೃತಿ ಸುಂದರರಾಜ್ ಪಿಟೀಲಿನಲ್ಲಿ ಹಾಗೂ ಮಾ. ಆದಿತ್ಯರಾಜ ಗೋಪಾಲ್ ನೆರವಾದರು.

ಅಂದು ಶುಕ್ರವಾರದ ಪ್ರಯುಕ್ತ ಮಹಿಳೆಯರೆಲ್ಲರಿಗೂ ಸಂಜೆ ಅರಿಶಿನ ಕುಂಕುಮದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸೆಪ್ಟೆಂಬರ್ 2 ಶನಿವಾರ ಕು. ಉಜ್ವಲ ಆಚಾರ್ಯಳ ಭಾವಗೀತೆಗಳ ಕಾರ್ಯಕ್ರಮವನ್ನಿಡಲಾಗಿತ್ತು. ಉಜ್ವಲ ನಮ್ಮ ಪ್ರೀತಿಯ ಹಿರಿಯ ಶ್ರೀಮತಿ ಸುಶೀಲಕ್ಕನ ಮೊಮ್ಮಗಳು, ಸುಶೀಲಾ ಆಚಾರ್ಯ (ಸುಶೀಲಕ್ಕ) ಎಂದರೆ ಎಲ್ಲರಿಗೂ ಅಚ್ಚುಮೆಚ್ಚು, ಅವರೂ ಅನೇಕ ವರ್ಷಗಳು ನಮ್ಮ ಗಣಪತಿಯ ಸೇವೆಯನ್ನು ಮಾಡಿದ್ದಾರೆ. ವಿಸರ್ಜನೆಯ ದಿನದ ಭಜನಾ ಕಾರ್ಯಕ್ರಮದ ನೇತೃತ್ವದಲ್ಲಿ ಕು. ಉಜ್ವಲಳ ಜೊತೆ ಶ್ರೀಮತಿ ಪ್ರಮೋದಿನಿ ಅವರು ಸಹಗಾಯನ ನೀಡಿದರು. ''ಬಾರಯ್ಯ ಗಣಪತಿ...'' ಎಂಬ ಗಣಪತಿಯ ಸ್ತುತಿಯಿಂದ ಆರಂಭವಾಯಿತು. ನಂತರ ''ನೀ ಬಾಸಂಭವಿಸು...'' ಎಂಬ ಗುರು ಪ್ರಾರ್ಥನೆ, ''ಓಂ ನಮಃ ಶಿವಾಯ... '' ನಂತರ ಗಣಪತಿಯ ಪ್ರಾರ್ಥನೆ ಒಂದು ಇಂಗ್ಲಿಷ್ ಪದದಲ್ಲಿ, ''ಮಳೆ ಬಂದು....''; ''ರಂಗ ದೇವತೆಯೇ ನಿನಗೆ ನಮೊ... ಈ ಗೀತೆಯು ಬಹಳ ಇಂಪಾಗಿ ಮೂಡಿ ಬಂತು. ಹಾಗೂ ''ಏನು ನಿರುಪಮ ಸೊಬಗು...'' ಸಹ ಇಂಪಾಗಿ ಮೂಡಿ ಬಂತು. ಎಲ್ಲ ಗೀತೆಗಳು ಗುನು ಗುನಿಸುವಂತಿದೆ. ಇವರೊಂದಿಗೆ ಹಾರ್ಮೋನಿಯಂನಲ್ಲಿ ಶ್ರೀಮತಿ ಸುಶೀಲಾ ಆಚಾರ್ಯ ಹಾಗೂ ತಬಲದಲ್ಲಿ ಮಾ. ಅನುಪಮ ಅವರು ನೆರವಾದರು. ಡಾ. ಮಂಜುನಾಥ್‌ರವರು ಕಲಾವಿದರಿಗೆ ಪುಷ್ಪಗುಚ್ಛವನ್ನು ನೀಡಿ ಗೌರವಿಸಿದ ನಂತರ ಧನ್ಯವಾದಗಳೊಂದಿಗೆ ಕಾರ್ಯಕ್ರಮವು ಮುಗಿಯಿತು.

ಭಾವ ಗೀತೆಗಳ ಕಾರ್ಯಕ್ರಮದ ನಂತರ ಅದೇ ದಿನ ರಾತ್ರಿ ಘಂಟೆ 8.15ರಿಂದ ಬೆಂಗಳೂರಿನ ಶ್ರೀ ಕೇಶವ ಪ್ರಸಾದ್ ಅವರಿಂದ 'ಸ್ಯಾಕ್ಸೋಫೋನ್' ಕಛೇರಿಯನ್ನು ಏರ್ಪಡಿಸಲಾಗಿತ್ತು.

ಶ್ರೀ ಕೇಶವ ಪ್ರಸಾದ್ ಅವರು ಖ್ಯಾತ ಸ್ಯಾಕ್ಸೋಫೋನ್ ವಾದಕ ಶ್ರೀ ಕದ್ರಿ ಗೋಪಾಲನಾಥ್ ಅವರಲ್ಲಿ ಅಭ್ಯಾಸ ಮಾಡಿದ್ದಾರೆ. ಕಲಾವಿದರನ್ನು ಪರಿಚಯಿಸಿದ ನಂತರ ಕಾರ್ಯಕ್ರಮವನ್ನಾರಂಭಿಸಲಾಯಿತು. ದೀಕ್ಷಿತರ 'ವಾತಾಪಿ ಗಣಪತಿಂ...' ಎಂಬ ಕೃತಿಯಿಂದ ಕಛೇರಿಯನ್ನು ಆರಂಭಿಸಿದರು. ನಂತರ ತ್ಯಾಗರಾಜರ ಪಂಚರತ್ನ ಕೃತಿಗಳಲ್ಲೊಂದಾದ ''ಎಂದರೋ ಮಹಾನುಭಾವುಲ....'' ಎಂಬ ಕೃತಿ ಶ್ರೀ ರಾಗದಲ್ಲಿ ''ಮನಸಾ ಎಟುಲೊ'' ಎಂಬ ಕೃತಿ ನಂತರ ಹಿಂದೋಳ ರಾಗದಲ್ಲಿ 'ಸಾಮಜ ವರಗಮನ... ಈ ಕೃತಿಯಲ್ಲಿ 'ತನಿ' ಒಮ್ಮೆ ಮೃದಂಗವಾದನಕ್ಕೆ ಅವಕಾಶ ಕೊಟ್ಟರು. 'ಕೃಷ್ಣಾ ನೀ ಬೇಗನೆ ಬಾರೊ' 'ಪುರಂದರದಾಸರ' ಕೃತಿ 'ತಂಬೂರಿ ಮೀಟಿದವ...' ಭೈರವಿಯಲ್ಲಿ ನಂತರ 'ರಾಘವೇಂದ್ರ ಸ್ವಾಮಿಗಳು ರಚಿಸಿದ' ಇಂದು ಎನಗೆ ಗೋವಿಂದ ಭೈರವಿಯಲ್ಲಿ ನಂತರ 'ಭೌಳಿ' ರಾಗದಲ್ಲಿ ಅಣ್ಣಮಾಚಾರ್ಯರ ಕೃತಿ. ಎಲ್ಲರಿಗೂ ಮನಮೋಹಕವಾಗುವಂತಿತ್ತು. ಇವರೊಡನೆ ಶ್ರೀಮತಿ ಮಂಗಳಾ ವೈದ್ಯನಾಥನ್ ಪಿಟೀಲಿನಲ್ಲಿಯೂ ಹಾಗೂ ಮಾ. ದೇವಾನಂದ್ ಮೃದಂಗದಲ್ಲಿಯೂ ನೆರವಾದರು. ಶ್ರೀ ಮಂಜುನಾಥಯ್ಯನವರು ಕಲಾವಿದರಿಗೆ ಪುಷ್ಪಗುಚ್ಛವನ್ನು ನೀಡಿ ಗೌರವಿಸಿದ ಬಳಿಕ ಧನ್ಯವಾದಗಳೊಂದಿಗೆ ಕಾರ್ಯಕ್ರಮವು ಮುಕ್ತಾಯ ಗೊಂಡಿತು.

ಈ ಎಲ್ಲ ದಿನಗಳಲ್ಲೂ ಕಾರ್ಯಕ್ರಮ ಮುಗಿದ ಬಳಿಕ ಕೆಳಗಡೆ ಗಣಪತಿಯ ಪೂಜೆ ಮಹಾಮಂಗಳಾರತಿ ಹಾಗೂ ಪ್ರಸಾದ ವಿನಿಯೋಗವಾಯಿತು. ಶ್ರೀಮತಿ ಲಕ್ಷ್ಮೀಸೀತಾರಾಂ, ಶ್ರೀಮತಿ ರಮಾ ವಸಂತ್, ಶ್ರೀ ನಾಗಭೂಷಣ್ ಅವರು ಎಲ್ಲ ಕಾರ್ಯಕ್ರಮಗಳನ್ನು ನಿರ್ವಹಿಸಿದರು.

ಸೆಪ್ಟೆಂಬರ್ 3 ಭಾನುವಾರ, ವಿಶೇಷ ದಿನ. ಅಂದು ಗಣಪತಿಯ ವಿಸರ್ಜನೆ. 1 ವಾರದಿಂದ ಸಂಭ್ರಮದಿಂದ ನಡೆಯುತ್ತಿದ್ದ ಕಾರ್ಯಕ್ರಮಕ್ಕೆ ಅಂದು ಮುಕ್ತಾಯ. ಬೆಳಿಗ್ಗೆ 9.30 ಘಂಟೆಗೆ ಶಂಕರಮಠದ ಋತ್ವಿಕರಿಂದ ವೇದಘೋಷ, ನಂತರ ಗಣಪತಿಯ ಪೂಜೆ ಅಭಿಷೇಕ, ಎಲ್ಲವೂ ನಡೆಯಿತು. ಅಸೋಸಿಯೇಷನ್ನಿನ ಸದಸ್ಯರುಗಳು ಗಣಪತಿಯ ಕುರಿತು ಸ್ತೋತ್ರಗಳು, ಹಾಡುಗಳನ್ನು ಹಾಡಿದರು. ಶ್ರೀಮತಿ ರಾಜೇಶ್ವರಿ ಗೋಪಾಲಕೃಷ್ಣ, ಶ್ರೀಮತಿ ಸೌಮ್ಯ ವೆಂಕಟೇಶ, ಡಾ. ಮಂಜುನಾಥ್, ಶ್ರೀಮತಿ ಶ್ಯಾಮಲಾ ರಾಧೇಶ್, ಶ್ರೀಮತಿ ರಮಾ ನಾಗರಾಜ್ ಎಲ್ಲರೂ ಭಾಗವಹಿಸಿದ್ದರು. ವಿಶೇಷವೆಂದರೆ ರಮಾನಾಗರಾಜ್ ಅವರು ಹಾಡಿದ ಒಂದು ಸ್ತೋತ್ರದಲ್ಲಿ ವರ್ಣಮಾಲೆಯ ಅನುಕ್ರಮಾನುಸಾರವಾಗಿ 'ಅ'ಯಿಂದ 'ಹ' ವರೆಗೆ ಒಂದೊಂದು ಅಕ್ಷರಕ್ಕೂ ಗಣಪತಿಯ ಒಂದೊಂದು ವರ್ಣನೆ ಬಹಳ ಚೆನ್ನಾಗಿತ್ತು. ನಂತರ ಶ್ರೀ ಶ್ರೀನಿವಾಸ್ ದಂಪತಿಗಳು ಮಂಗಳಾರತಿ ಬೆಳಗಿದರು. ನಂತರ ಮರದ ಬಾಗಿನಗಳನ್ನು ಕೊಟ್ಟು, ಗೌರಮ್ಮನಿಗೆ ಸೋಬಲಕ್ಕಿ ಇಟ್ಟು, 'ಗಚ್ಛ ಗಚ್ಛ ಸುರ ಶ್ರೇಷ್ಠ' ಪುನರಾಗಮನಾ ಯ ಚ ಎಂದು ಮರು ಆಹ್ವಾನವನ್ನು ಕೊಟ್ಟು ಗೌರಮ್ಮ ಮತ್ತು ಗಣಪತಿಯನ್ನು ಅಲಂಕೃತ ವಾಹನದಲ್ಲಿ ಮೆರವಣಿಗೆಯಿಂದ ದಾದರ್ ಸಮುದ್ರದಲ್ಲಿ ವಿಸರ್ಜನೆ ಮಾಡಲಾಯಿತು. ಮೆರವಣಿಗೆಯು ಹೊರಟ ನಂತರ ನಮ್ಮ ರಾಘು ತಯಾರಿಸಿದ ಪುಷ್ಕಳ ಭೋಜನವನ್ನು ಮಾಡಿ ಎಲ್ಲರೂ ಸಂತೋಷದಿಂದ ಮನೆಗೆ ತೆರಳಿದರು.

- ರಮಾ ವಸಂತ್

# ಸುಮಧುರ ಸಂಜೆ

ಆಗಸ್ಟ್ ತಿಂಗಳು ಮುಂಬೈಯಲ್ಲಿ ವರುಣನ ಆರ್ಭಟ. ಅಂತೆಯೇ ಸಂಗೀತದ ಆರ್ಭಟ. ಅಂತೆಯೇ ಸಂಗೀತದ ಆರ್ಭಟವೂಕೂಡಾ ದೂರದ ಮೈಸೂರಿನಿಂದ ಸಂಗೀತ ಶಿಬಿರಕ್ಕಾಗಿ ಆಗಮಿಸಿದ್ದ ಡಾ. ವಿದುಷಿ ಶ್ರೀ ಸುಕನ್ಯಾ ಪ್ರಭಾಕರ್ ಅವರಿಂದ ಆಗಸ್ಟ್ 13ರಂದು



ಅಸೋಸಿಯೇಷನ್‌ನಲ್ಲಿ ಸಂಗೀತ ಸಂಜೆ ಏರ್ಪಟ್ಟಿತ್ತು. ಅಧ್ಯಕ್ಷರಾದ ದೊರೆಸ್ವಾಮಿಯವರು ಕಲಾವಿದರಿಗೆ ಹೂಗುಚ್ಛವನ್ನು ನೀಡುವುದರೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಇದೇ ಸಮಯದಲ್ಲಿ ಶಿಬಿರದಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳೂ ಕೂಡಾ ತಮ್ಮ ಪ್ರೀತಿಯ ಕಾಣಿಕೆಯನ್ನು ಸಲ್ಲಿಸಿದರು.

ಯಾ ದೇವಿ ಸರ್ವ ಭೂತೇಷು ಮಾತೃ ರೂಪೇಣ ಸಂಸ್ಥಿತಾ

ಯಾ ದೇವಿ ಸರ್ವಭೂತೇಷು ಬುದ್ಧಿ ರೂಪೇಣ ಸಂಸ್ಥಿತಾ

ಯಾ ದೇವಿ ಸರ್ವ ಭೂತೇಷು ಶಾಂತಿ ರೂಪೇಣ ಸಂಸ್ಥಿತಾ

ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ

ಪ್ರಪಂಚದಲ್ಲಿ ಎಲ್ಲೆಡೆಯೂ ಶಾಂತಿ ಸ್ಥಾಪಿಸಲಿ ಎಂದು ದೇವಿಯನ್ನು ಸ್ಮರಿಸುತ್ತಾ ಕಾರ್ಯಕ್ರಮವನ್ನು ಪ್ರಾರಂಭಿಸಿದ ಅವರು ಶ್ರೀ ರುದ್ರಪಟ್ಟಂ ವೆಂಕರಮಣ ಅಯ್ಯರ್ ಅವರ ಕಮಲಾಮನೋಹರಿ ವರ್ಣದೊಂದಿಗೆ ಮುಂದುವರೆದರು. ನಂತರ ಪುರಂದರದಾಸರ 'ಜಯ ಜಾನಕೀ ಕಾಂತ'ವನ್ನು ನಾಟದಲ್ಲಿ ಹಾಡಿ ಸ್ವರ ಪ್ರಸಾರ ಮಾಡಿ ರಂಜಿಸಿದರು. ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರ ಮೋಂಡ್ ರಾಗದ 'ಬ್ರಹ್ಮಾಂಡ ವಲಯೇ', ಪುರಂದರದಾಸರ 'ದೇವ ಬಂದ ನಮ್ಮ ಸ್ವಾಮಿ ಬಂದಾನೋ' ಮೋಹನ ಕಲ್ಯಾಣಿಯಲ್ಲಿ ರಾಗಾಲಾಪನೆಯೊಂದಿಗೆ ಹಾಡಿದರು. ನಂತರ ಶ್ರೀ ತ್ಯಾಗರಾಜರ ಪೂರ್ಣಷಡ್ಜ ರಾಗದ 'ಲಾವಣ್ಯರಾಮ' ಕೃತಿಯನ್ನು ಹಾಡಿದರು. ಚರಣದ 'ನೀ ಮನಸು, ನೀ ಸೊಗಸು, ನೀ ದಿನಾಸು ರಾಮ' ಎಂಬಲ್ಲಿ ಲಾವಣ್ಯರಾಮನೇ ಕಣ್ಣ ಮುಂದೆ ಬಂದು ನಿಂತಂತೆ ಭಾಸವಾಗುತ್ತಿತ್ತು. ನಂತರ ಮೈಸೂರು ಮಹಾರಾಜರ ಪ್ರತಾಪವರಾಳಿಯ ಬೂರಿ ಭಾಗ್ಯ ಲಹರಿ ಕೃತಿಯನ್ನು ಚುಟುಕಾಗಿ ಹಾಡಿದರು.

ಕಾರ್ಯಕ್ರಮವನ್ನು ಮುಂದುವರಿಸಿದ ಅವರು ಊತ್ತುಕಾಡು ಅವರ ಹಂಸನಾದದ 'ಕಲ್ಯಾಣರಾಮ' ಕೃತಿಯನ್ನು ದೀರ್ಘವಾದ ರಾಗಾಲಾಪನೆ, ನೆರವಲ್, ಸ್ವರಪ್ರಸ್ತಾರದೊಂದಿಗೆ ಹಾಡಿ ಶ್ರೋತೃಗಳನ್ನು ಆನಂದದಲ್ಲಿ ಮುಳುಗಿಸಿದರು. 'ರಾಘವ ರಾಮ ರಘು ರಾಮ ರಾಮ ಜನಕ ಜಾ ರಮಣ ಮನೋಹರ ಸೀತಾ' ಎಂಬಲ್ಲಿ ನೆರವಲ್ ಮಾಡಿ ಸೀತಾ ಸಹಿತ ರಾಮನನ್ನೋ ಧರೆಗಿಳಿಸಿ, ಭಿನ್ನವಾದ ಶೈಲಿಯಲ್ಲಿ ಸ್ವರಪ್ರಸ್ತಾರ ಮಾಡಿ ನಮ್ಮನ್ನೆಲ್ಲಾ ರಂಜಿಸಿದರು. ನಂತರ ನೀಲಾಂಬರಿಯಲ್ಲಿ ಪದ, ಕಾಮ ವರ್ಧಿನಿಯಲ್ಲಿ ಕೃಷ್ಣಾ ಮುರಾರಿ, ಮಿಶ್ರ ಶಿವರಂಜನಿಯಲ್ಲಿ ರಾಘವೇಂದ್ರ ರಾಘವೇಂದ್ರ, ಕಮಾಚ್‌ನಲ್ಲಿ ರಂಗ ಬಾರನೆ ಹಾಡಿ ಶ್ರೋತೃಗಳನ್ನು ಭಾವುಕರನ್ನಾಗಿಸಿದರು. ಕಡೆಯದಾಗಿ ಶಂಕರಾಚಾರ್ಯರ 'ಮೈತ್ರೀಂ ಭಜತಾಂ' ಹಾಡಿ ಸ್ವತಂತ್ರ್ಯ ದಿನಕ್ಕೆ ಹತ್ತಿರವಿದ್ದುದರಿಂದ 'ಜಯ ಜಯ ಭಾರತ ಜನನೀ' ಎಂಬ ದೇಶಭಕ್ತಿ ಗೀತೆಯೊಂದಿಗೆ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಿದರು.

ಮೃದಂಗದಲ್ಲಿ ಶ್ರೀ ಶಂಕರನಾರಾಯಣ್ ಮತ್ತು ವೈಯೊಲಿನ್ ನಲ್ಲಿ ರವಿ ಅನಂತರಾಮನ್ ಅವರು ಉತ್ತಮವಾದ ಸಹಕಾರ ನೀಡಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

- ಶ್ರೀಮತಿ ಶ್ಯಾಮಲಾ ರಾಧೇಶ್

## Congratulations!



Former Supreme Court Judge, Justice Shri. B. N. Srikrishna, has been appointed as the Chairman of the Sixth Pay Commission by the Government of India. The Commission will review and revises the salaries and allowances of Central Govt. employees. Nesaru extends a hearty congratulation to Justice Srikrishna.

## Congratulations

Arjun Kshyap, a Child Artist of the Association and son of Lalithu (Lalitha Balu) & Balu (K. Balasubramanya) is currently Residing in the US. He has been awarded the First Prize for "Outstanding Story On Any Subject by a South Asian Student in the US and Canada in 2005: All Media, including Photography". The award



has been given by the South Asian Journalists Association, New York.

Arjun did his MBA in Mumbai and his M.A. in journalism of Michigan State University. He is currently working for Washington Business Journal, as a Financial Journalist.

He is also the recipient of Great Waters institute Fellowship, by the Institute for Journalism and Natural Resources, Montana, which involves a 10-day expedition in the Great Lakes area for Studying & Reporting on Environment and Natural Resources in the Great Lakes area.

Arjun is in a field where perhaps few Indians could be found and has won recognition for his work. Nesaru congratulates him and wishes him all the best.

# ಪುಲ : ಒಂದು ನೆನಪು - ಡಾ. ಹಾ. ಮಾ. ನಾಯಕ

ಕರ್ನಾಟಕ - ಮಹಾರಾಷ್ಟ್ರಗಳೆರಡೂ ಅಕ್ಕಪಕ್ಕದ ಪ್ರದೇಶಗಳು. ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ ಒಂದರ ಮೇಲೆ ಇನ್ನೊಂದರ ಪ್ರಭಾವ ಶತಮಾನಗಳಷ್ಟು ಹಳೆಯದು !.

ಮರಾಠಿ ಸಾಹಿತಿಗಳಿಗೆ ಯಾಕೋ ಕನ್ನಡವನ್ನು ಕಂಡರೆ ಅಷ್ಟು ಹಿತವಿಲ್ಲ. ಕೆಲವರು ಅದನ್ನು ದೂಷಿಸುವಷ್ಟೂ ದೂರ ಹೋಗುತ್ತಾರೆ ! ಆದರೆ ಇದಕ್ಕೆ ಅಪವಾದವಾದವರೂ ಕೆಲವರಿದ್ದಾರೆ. ಇವರಲ್ಲಿ 'ಮಹಾರಾಷ್ಟ್ರ ಭೂಷಣ' ಪುರುಷೋತ್ತಮ ಲಕ್ಷ್ಮಣ ದೇಶಪಾಂಡೆಯವರೂ ಒಬ್ಬರು. ಅವರು ಕನ್ನಡವನ್ನು ಪ್ರೀತಿಸಿದರು. ಗೌರವಿಸಿದರು. ಈ ಅಪರೂಪದ ಜೀವಿ ಜೂನ್ ೧೨ರಂದು ತಮ್ಮ ೮೧ನೇ ವಯಸ್ಸಿನಲ್ಲಿ ತೀರಿಕೊಂಡರು. (ಜನನ : ನವೆಂಬರ್ ೮, ೧೯೧೯). ಆರಂಭದಲ್ಲಿ ಪಿ.ಎಸ್. ಎಂದು, ನಂತರ ಪುಲ ಎಂದೂ ಮರಾಠಿ ಜಗತ್ತಿನಾದ್ಯಂತ ಅವರು ಸುಪರಿಚಿತರಾಗಿದ್ದರು. ಮನೆಮಾತಾಗಿದ್ದರು.

ಬೇಂದ್ರೆ, ಮಾಸ್ತಿಯವರೂ ಸೇರಿದಂತೆ ಹಲವಾರು ಜನ ಕನ್ನಡ ಸಾಹಿತಿಗಳನ್ನು ಪುಲ ಬಲ್ಲವರಾಗಿದ್ದರು. ಆ ಸಾಹಿತಿಗಳನ್ನು ಕುರಿತು ಅವರು ಆಡಿದ ಮಾತುಗಳಿಂದಲೇ ಅವರ ಮನೋಧರ್ಮವನ್ನು ಅರಿಯಬಹುದು. ಬೇಂದ್ರೆಯವರನ್ನು ಕುರಿತು ಪುಲ ಹೇಳುವುದು : ''ಕೇವಲ ಪರಿಚಯ ಅಷ್ಟೇ ಅಲ್ಲ, ಅವರ ಸ್ನೇಹ ಮತ್ತು ಆಶೀರ್ವಾದಗಳನ್ನು ಸಂಪಾದಿಸುವ ಭಾಗ್ಯ ನನ್ನದಾಗಿತ್ತು. ಅವರು ವಯಸ್ಸಿನಿಂದಲೂ, ಕರ್ತವ್ಯದಿಂದಲೂ ನನಗಿಂತ ಹಿರಿಯರು. ಅವರ ಜೊತೆ ಮಾತನಾಡುವಾಗ ನಮ್ಮನ್ನು ನಾವೇ ಮರೆಯುತ್ತಿದ್ದೆವು. ಕಾವ್ಯಗಾಯನ ಅಂದಾಕ್ಷಣ ನನಗೆ ಮೊದಲು ಬೇಂದ್ರೆಯವರೇ ನೆನಪಾಗುತ್ತಾರೆ. ಅವರ ಬಾಯಿಯಿಂದ ಕವಿತೆ ಕೇಳುವಾಗ ಅವರೇ ಒಂದು ಕವಿತೆಯಾಗುತ್ತಾರೇನೋ ಅಂತ ಭಾಸವಾಗುತ್ತದೆ. ನಾನು ಮರಾಠಿಯಲ್ಲಿ ಮತ್ತು ಇತರ ಭಾರತೀಯ ಭಾಷೆಗಳಲ್ಲಿಯೂ ಕೂಡ ಎಷ್ಟೋ ಶ್ರೇಷ್ಠ ಕವಿಗಳ ಕಾವ್ಯ ಕೇಳಿದ್ದೇನೆ. ಆದರೆ ಕವಿಯ ಮುಖದಿಂದ ಪ್ರತಿಯೊಂದು ಶಬ್ದ ಹೇಗೆ ಜೀವಂತವಾಗಿ ಹೊರಬರುತ್ತದೆಂದು ಬೇಂದ್ರೆಯವರಲ್ಲಿಯೇ ಮೊದಲ ಬಾರಿ ಅನುಭವಿಸಿದ್ದೇನೆ.''

ಮಾಸ್ತಿಯವರು : ''ಮಾಸ್ತಿಯವರ ಪರಿಚಯ ಇತ್ತು. ಅಷ್ಟೇ ಅಲ್ಲ, ನನ್ನ ಸಾಹಿತ್ಯ ಓದಿ ನನಗೆ ಬಲು ಪ್ರೀತಿಯಿಂದ ಮಾರ್ಗದರ್ಶನ ಮಾಡಿದ ಕೆಲವೇ ಭಾರತೀಯ ಲೇಖಕರಲ್ಲಿ ಅವರೊಬ್ಬರು. ಅವರ ಬಗ್ಗೆ ತುಂಬ ಆದರ ಇದೆ. ನಾನು ಅವರನ್ನು ಎಷ್ಟೋ ಸಲ ಭೇಟಿಯಾಗಿದ್ದೇನೆ. ಅವರಂಥ ಸಾತ್ವಿಕ ಸಾಹಿತಿಗಳು ಬಹಳ ಕಡಿಮೆ. 'ತನು ನಿನ್ನದು ಮನ ನಿನ್ನದು' ಎಂಬ ನನ್ನ ನಾಟಕದ ಕನ್ನಡ ಆವೃತ್ತಿಯ ೫೦ನೆಯ ಪ್ರದರ್ಶನ ಬೆಂಗಳೂರಿನಲ್ಲಿ ನಡೆದಾಗ ನಾನು ಹೋಗಿದ್ದೆ. ನಾಟಕದ ಮಧ್ಯದಲ್ಲಿ ಅವರಿಂದ ನನಗೆ ಸನ್ಮಾನವಾಯಿತು. ಅವರು ಭಾಷಣ ಮಾಡುವ ಮೊದಲು ನನ್ನನ್ನು ಪ್ರೀತಿಯಿಂದ ಅಪ್ಪಿಕೊಂಡು ಮುದ್ದಿಸಿದರು. ಅಜ್ಜ ಮೊಮ್ಮಗನನ್ನು ಮುದ್ದಿಸುವ ಹಾಗೆ ! ನನ್ನ ಇಡೀ ಜೀವನದಲ್ಲಿ ಅನೇಕ ಪಾರಿತೋಷಕಗಳನ್ನು ಗಳಿಸಿದ್ದೇನೆ. ಆದರೆ ಮಾಸ್ತಿಯವರ ಮುತ್ತು ಎಲ್ಲಕ್ಕೂ ದೊಡ್ಡದಾದ ಪಾರಿತೋಷಕ !''

ಕಾರಂತ : ''ಕಾರಂತರ ಸಾಹಿತ್ಯಕ್ಕಿಂತಲೂ ಕಾರಂತರೇ ಹೆಚ್ಚು ಎತ್ತರವಾಗಿದ್ದಾರೆ ಎಂಬ ಭಾವನೆ ನನ್ನದು. ಈಗ ಇಡೀ ಭಾರತದಲ್ಲಿ, ಸಾಹಿತ್ಯ ಮತ್ತು ಕಲೆಯ ಕ್ಷೇತ್ರದಲ್ಲಿ ಮೂವರು ಮಹನೀಯರ ಹೆಸರು ಹೇಳಿರಿ ಎಂದು ಯಾರಾದರೂ ಕೇಳಿದರೆ ನಾನು ಮೊದಲನೆಯ ಹೆಸರು ಕಾರಂತರದೆಂದೇ ನಿಸ್ಸಂಶಯವಾಗಿ ಹೇಳುವೆನು. ಠಾಕೂರರ ನಂತರ ಇಷ್ಟು ಸಂಪೂರ್ಣವಾಗಿ ಕಲಾವಂತರಾಗಿರುವವರು ಕಾರಂತರೇ !''

'ಕುವೆಂಪು': 'ಹೆಸರು ಕೇಳಿದ್ದೇನೆ. ಕೆ.ವಿ. ಪುಟ್ಟಪ್ಪ ಅಲ್ವ? ಅವರ ''ರಾಮಾಯಣ ದರ್ಶನಂ'ದ ಬಗ್ಗೆ ಕೇವಲ ಓದಿದ್ದೇನೆ. ಆದರೆ ಅವರನ್ನು ಕಾಣುವ ಅಥವಾ ಭೇಟಿಯಾಗುವ ಸುಯೋಗ ಇನ್ನೂ ಬರಲಿಲ್ಲ!''

'ಶ್ರೀರಂಗ': 'ಕನ್ನಡದಲ್ಲಿ ಹೊಸ ನಾಟಕ ಎಂಬ ಶಬ್ದ ಪ್ರಯೋಗ ಮಾಡುವಾಗಲೂ ಅವರಿಗೆ ನಮಸ್ಕಾರ ಮಾಡಿಯೇ ಮುಂದೆ ಹೋಗಬೇಕು. ಕನ್ನಡದಲ್ಲಿಯೇ ಅಲ್ಲ, ಇಡೀ ಭಾರತೀಯ ರಂಗಭೂಮಿಯ ಮೇಲೆ ನಿಜವಾದ ಅರ್ಥದಲ್ಲಿ ಅವರ ಪ್ರಯತ್ನ 'ಆದ್ಯ'ವೆಂದು ಹೇಳಬೇಕು.''

'ಕೈಲಾಸಂ': ಮರಾಠಿಯಲ್ಲಿ ಅನುವಾದಗೊಂಡ ಅವರ ನಾಟಕಗಳನ್ನು ಮೊದಲ ಬಾರಿಗೆ ಓದಿದಾಗ, ಅವರನ್ನು ಭೆಟ್ಟಿಯಾಗಬೇಕು, ಕನ್ನಡ ಕಲಿಯಬೇಕು ಅನ್ನಿಸಿತು. ಆಧುನಿಕ ಭಾರತೀಯ ಸಾಹಿತ್ಯದ ಜನಕರಲ್ಲಿ ಕೈಲಾಸಂ ಅವರನ್ನು ನಾವು ಸ್ಮರಿಸಬೇಕು ಅನ್ನಿಸುತ್ತದೆ.''

ಭೈರಪ್ಪ : ''ಅವರ 'ವಂಶವೃಕ್ಷ' ಓದಿದ್ದೇನೆ. ಓದಿ, ತುಂಬಾ ಸಂತುಷ್ಟನಾಗಿದ್ದೇನೆ. ಕನ್ನಡದಲ್ಲಿ ಎಷ್ಟು ಉತ್ತಮೋತ್ತಮ ಲೇಖಕರು ಬರೆಯುತ್ತಿದ್ದಾರೆಂದು ಅನ್ನಿಸಿತು. 'ವಂಶವೃಕ್ಷ'ದಲ್ಲಿಯ ಪಾತ್ರಗಳು, ಅದರಲ್ಲಿಯ ಭಾಷೆ, ಅಲ್ಲಿಯ ಸನ್ನಿವೇಶ, ಇವುಗಳನ್ನು ಒಮ್ಮೆ ಓದಿದ ಮೇಲೆ ಮರೆಯಲು ಅಸಾಧ್ಯ.''

ಇಷ್ಟು ಆಳವಾಗಿ ಕನ್ನಡ ಸಾಹಿತ್ಯ ಪರಿಚಯವಿರುವ ಮತ್ತೊಬ್ಬ ಮರಾಠಿ ಸಾಹಿತಿ ಇಲ್ಲವೆಂದರೆ ಉತ್ಪ್ರೇಕ್ಷೆಯಾಗುವುದಿಲ್ಲ. ''ನನಗೆ ಕನ್ನಡದ ಋಣಾನುಬಂಧ ಹುಟ್ಟಿದಾಗಿನಿಂದಲೂ ಇದೆ'' ಎಂದು ಹೇಳಿಕೊಳ್ಳುತ್ತಿದ್ದ ಪುಲ ಅವರ ತಾಯಿಯ ತವರುಮನೆ ಕಾರವಾರ. ಅವರ ಬಾಲ್ಯ ಯೌವ್ವನಗಳೆಲ್ಲ ಮುಂಬಯಿ ಮಹಾನಗರದಲ್ಲಿಯೇ ಕಳೆದವು. ಜೊತೆಯವರು, ರಜೆ ಬಂದಾಗ, ''ನನ್ನ ಊರಿಗೆ ಹೋಗುತ್ತೇನೆ'' ಎಂದಾಗ ನನ್ನ ಊರು ಯಾವುದು ಎಂದು ಅವರು ಯೋಚಿಸುತ್ತಿದ್ದರಂತೆ ! ಬದುಕಿನ ಕೊನೆಯ ವರ್ಷಗಳಲ್ಲಿ ''ನಾನು ಕನ್ನಡ ಕಲಿಯದೆ ಎಂಥ ತಪ್ಪು ಮಾಡಿದೆ?'' ಎಂದು ನೊಂದು ಕೊಳ್ಳುತ್ತಿದ್ದ ಪುಲ ಹೇಳುತ್ತಾರೆ : ''ನನಗೆ ಕನ್ನಡ ಓದಲು ಅಥವಾ ಬರೆಯಲು ಬಾರದಿದ್ದರೂ ಕನ್ನಡ ಭಾಷೆಯ ರುಚಿಯನ್ನು ಮಾತ್ರ ನಾನು ಬಲ್ಲೆ. ''ಏನ್ರೀ, ಹೇಗಿದ್ದೀರಿ?'' ಎಂಬಂಥ ಸಾದಾ ಪ್ರಶ್ನೆಗಳನ್ನು ಕೇಳುವಾಗ ಕೂಡ ಕನ್ನಡ ಭಾಷೆಯಲ್ಲಿ ವ್ಯಕ್ತವಾಗುವ ಆತ್ಮೀಯತೆ ಮರಾಠಿಗಿಂತಲೂ ಹೆಚ್ಚು ಉತ್ಕಟವಾಗಿದೆ.''

ಮುಂಬಯಿ ಮತ್ತು ಪುಣೆ ವಿ.ವಿ.ಗಳಿಂದ ಎಂ.ಎ. ಹಾಗೂ ಎಲ್‌ಎಲ್.ಬಿ. ಪದವಿಗಳನ್ನು ಪಡೆದಿದ್ದ ಪುಲ ಬೆಳಗಾವಿಯ ಆರ್.ಪಿ.ಡಿ. ಕಾಲೇಜಿನಲ್ಲಿ ಕೆಲಕಾಲ ಮರಾಠಿ ಕಲಿಸುತ್ತಿದ್ದರು; ಮುಂಬಯಿ ಕೀರ್ತಿ ಕಾಲೇಜಿನಲ್ಲಿ ಮರಾಠಿ ಪ್ರಾಧ್ಯಾಪಕರಾಗಿದ್ದರು. ಆ ಆ ಮೇಲಿನ ಅವರ ಬದುಕೆಲ್ಲ ಆಕಾಶವಾಣಿ, ದೂರದರ್ಶನಗಳಲ್ಲಿ ಕಳೆಯಿತೆಂದು ಹೇಳಬಹುದು. ಅವರು ನಾಟಕಕಾರ, ಚಿತ್ರ ತಯಾರಕ, ಸಂಗೀತ ನಿರ್ದೇಶಕ, ಹಾಡುಗಾರ, ಗೀತ ರಚನಕಾರ, ನಟ ಆಗಿದ್ದರು. ತಮ್ಮ ಏಕ ಪಾತ್ರಾಭಿನಯಗಳಲ್ಲಿ ಅವರು ಅದ್ವಿತೀಯರಾಗಿದ್ದರು. ಅನನ್ಯರೆನಿಸಿದ್ದರು. ಮರಾಠಿ ಸಾಹಿತ್ಯದಲ್ಲಿ ಅವರು ಗೊಮ್ಮಟಸದೃಶರಾಗಿದ್ದರು ಎಂದರೆ ತಪ್ಪಾಗುವುದಿಲ್ಲ. ಸುಮಾರು ನಲವತ್ತು ವರ್ಷಗಳ ಕಾಲ ಇಡೀ ಜಗತ್ತಿನಾದ್ಯಂತ ಮರಾಠಿ ಪ್ರೇಕ್ಷಕರನ್ನು ರೋಮಾಂಚನಗೊಳಿಸಿದರು. ಅವರು ಮರಾಠಿ ಮಧ್ಯಮ ವರ್ಗದವರ ಆಶೋತ್ತರಗಳನ್ನು ಬಲ್ಲವರಾಗಿದ್ದರು. ಅವರ ಮಾತುಗಳನ್ನು, ಆ ಮಾತುಗಳಿಂದ ಹೊರಹೊಮ್ಮುತ್ತಿದ್ದ ಅರ್ಥ

ವೈವಿಧ್ಯವನ್ನು ಪ್ರೇಕ್ಷಕರು ನೋಡಿ, ಕೇಳಿ ತಣಿಯುತ್ತಿದ್ದರು, ಕುಣಿದಾಡುತ್ತಿದ್ದರು, ಕುಪ್ಪಳಿಸುತ್ತಿದ್ದರು.

ಅವರನ್ನು ಎರಡು ಮೂರು ಸಲ ಭೇಟಿಯಾಗಿ ಮಾತನಾಡುವ ಪುಣ್ಯ ನನ್ನದಾಗಿತ್ತು. ಆ ಸಂದರ್ಭಗಳನ್ನು ನಾನೆಂದೂ ಮರೆಯಲಾರೆ ! ೧೯೭೮ರಲ್ಲಿರಬೇಕು, ಪುಣೆಯಲ್ಲಿ ಮರಾಠಿ - ಕನ್ನಡ ಸ್ನೇಹವರ್ಧನ ಕೇಂದ್ರದ ಆಶ್ರಯದಲ್ಲಿ ಪುಲ ಮುಖ್ಯ ಅತಿಥಿಯಾಗಿದ್ದ ಒಂದು ಸಮಾರಂಭಕ್ಕೆ ನಾನು ಉದ್ಘಾಟಕನಾಗಿ ಹೋಗಿದ್ದೆ. ನನ್ನ ಉದ್ಘಾಟನಾ ಭಾಷಣದಲ್ಲಿ ನಾನು ಹೇಳಿದೆ : ''ಕನ್ನಡ - ಮರಾಠಿ ಎಂದರೆ ಸಾಂಸ್ಕೃತಿಕವಾಗುತ್ತದೆ. ಕರ್ನಾಟಕ - ಮಹಾರಾಷ್ಟ್ರವೆಂದರೆ ರಾಜಕೀಯ ಆಗುತ್ತದೆ.'' ಈ ಮಾತುಗಳನ್ನು ಕೇಳಿ ಸಭಿಕರೆಲ್ಲ ಸಂತೋಷಿಸಿ ದೀರ್ಘ ಕರತಾಡನದಿಂದ ಸ್ವಾಗತಿಸಿದರು. ''ಬಹಳ ಚೆನ್ನಾಗಿ ಹೇಳಿದಿರಿ'' ಎಂದು ಪುಲ ಮೆಚ್ಚಿ ನುಡಿದರು. ಪಂಡಿತ ಅವಳೀಕರ್ ಅವರ ಕನ್ನಡ - ಮರಾಠಿ ಕುರಿತ ಪುಸ್ತಕದಲ್ಲಿ ಉಲ್ಲೇಖಗೊಂಡ ಒಂದು ಪ್ರಸಂಗವನ್ನೂ ಕುರಿತು ನಾನು ಹೇಳಿದೆ : ಪ್ರಸಿದ್ಧ ಪ್ರಾಧ್ಯಾಪಕರೊಬ್ಬರಿಗೆ, ಪಾಠ ಹೇಳುತ್ತಿರುವಾಗ 'ಉತ್ತತ್ತಿ' ಎಂಬ ಪದ ಗಂಟಲು ಹಿಡಿಯಿತಂತೆ. ಅದೇ ಧ್ಯಾನದಲ್ಲಿ ಸಪ್ಪೆ ಮೋರೆ ಹಾಕಿಕೊಂಡು ಕುಳಿತ ಅವರಿಗೆ ಹೆಂಡತಿ ಕೇಳಿದಳು : ''ಏನು ಸಮಾಚಾರ, ಏಕೆ ಸಪ್ಪಗಿದ್ದೀರಿ?'' ಆಗ ಆ ಪ್ರಾಧ್ಯಾಪಕರು ನಡೆದದ್ದನ್ನೆಲ್ಲ ಹೇಳಿದರು ! ಅವರ ಹೆಂಡತಿ ಕರ್ನಾಟಕದವಳು. ಅವಳು ನಕ್ಕು 'ಉತ್ತತ್ತಿ' ಎಂದರೇನೆಂದು ಹೇಳಿದಳಂತೆ. ಇದರಿಂದ ಆ ಪ್ರಾಧ್ಯಾಪಕರಿಗೆ ಖುಷಿಯಾಯಿತಂತೆ ! ಈ ಪ್ರಸಂಗವನ್ನು ಎತ್ತಿಕೊಂಡು ಪುಲ ಹೇಳಿದ್ದಿದು : ''ಯಾರಿಂದ ಯಾರು ಎಷ್ಟು ಪದ ಎರವಲು ತೆಗೆದುಕೊಂಡಿದ್ದಾರೆ ಎಂಬುದು ಮುಖ್ಯವಲ್ಲ. ಆ ಲೆಕ್ಕಾಚಾರಕ್ಕೆ ಅರ್ಥವಿಲ್ಲ ! ಕನ್ನಡದಿಂದ ನಮಗೆ ಅಪ್ಪ, ಅಣ್ಣ, ತಾಯಿ, ಅಕ್ಕ ಮುಂತಾದ ಆತ್ಮೀಯ ಪದಗಳೇ ಬಂದಿವೆ. ಅಂದಮೇಲೆ ಮತ್ತೇನು?'' ಅವರ ಮಾತುಗಳಲ್ಲಿ ಕನ್ನಡ ಪ್ರೀತಿ ಎದ್ದು ತೋರುತ್ತಿತ್ತು !

ಪುಲ ದೇಶಪಾಂಡೆ ಮರಾಠಿಯಲ್ಲಿ ಬರೆಯುತ್ತಿದ್ದ ಭಾರತೀಯ ಲೇಖಕರು. ಸುಮಾರು ೨೫ ನಾಟಕಗಳನ್ನೂ, ಏಳೆಂಟು ಕಾದಂಬರಿಗಳನ್ನೂ, ಐದು ಪ್ರವಾಸ ಕಥನಗಳನ್ನೂ, ಮೂರು ವ್ಯಕ್ತಿಚಿತ್ರ ಸಂಗ್ರಹಗಳನ್ನೂ, ಇತರ ಸುಮಾರು ಹತ್ತು ಕೃತಿಗಳನ್ನೂ ಅವರು ರಚಿಸಿದ್ದಾರೆ. 'ವ್ಯಕ್ತಿ ಆಣಿವಲ್ಲೀ' ಎಂಬ ಅವರ ಕಾಲ್ಪನಿಕ ವ್ಯಕ್ತಿಚಿತ್ರಗಳ ಸಂಕಲನಕ್ಕೆ ೧೯೬೫ರಲ್ಲಿ ಸಾಹಿತ್ಯ ಅಕಾದೆಮಿ ಪ್ರಶಸ್ತಿ ದೊರೆಯಿತು. ಅಲ್ಲಿಯವರೆಗೆ ಅಂಥ ಕೃತಿಗೆ ಪ್ರಶಸ್ತಿ ಬಂದದ್ದು ಅದೇ ಮೊದಲ ಬಾರಿಗೆ ! ಅದೊಂದು ಹಾಸ್ಯ ತುಂಬಿದ ಕೃತಿ. ''ನಗಿಸುವುದನ್ನು ಬಿಟ್ಟು ಬೇರೆ ಏನು ಕೆಲಸವಿದೆ, ನಮಗೆ?'' ಎಂದು ಪುಲ ಕೇಳುತ್ತಾರೆ. ''ನಗಿಸುವುದೇ ನನ್ನ ಉದ್ಯೋಗ'' ಎಂಬುದು ಅವರ ಒಂದು ಪ್ರಸಿದ್ಧವಾದ ಮಾತು ! ಆದ್ದರಿಂದಲೇ ಅವರ ಭಾಷಣಗಳಿಗೆ ಅಸಂಖ್ಯಾತ ಜನ ಸೇರುತ್ತಿದ್ದರು. ಪುಲ ನಿರರ್ಗಳವಾಗಿ ಮಾತನಾಡುತ್ತಿದ್ದರು. ಅವರು ಸಾಮಾನ್ಯ ಪದಗಳಿಂದಲೂ ಹೊರಡಿಸುತ್ತಿದ್ದ ವಿಶೇಷ ಅರ್ಥ ಮಹತ್ವದ್ದಾಗಿರುತ್ತಿತ್ತು. ಪುಲ ಅವರ ಭಾಷಣವೆಂದರೆ ಜನ ಹುಚ್ಚೆದ್ದು ಕುಣಿಯುತ್ತಿದ್ದರು. ಚಪ್ಪಾಳೆಗಳಿಲ್ಲದ ಅವರ ಭಾಷಣಗಳೇ ಇರುತ್ತಿರಲಿಲ್ಲ. ವಿನೋಬಾ ಭಾವೆ ಅವರನ್ನು ಯಾವಾಗಲೂ ಮೆಚ್ಚಿಕೊಂಡು ಹೊಗಳುತ್ತಿದ್ದರು. ಆದರೆ ಇಂದಿರಾ ಗಾಂಧಿ ತುರ್ತು ಪರಿಸ್ಥಿತಿಯನ್ನು ತಂದಾಗ, ವಿನೋಬಾ ಅದನ್ನು 'ಅನುಶಾಸನ ಪರ್ವ' ಎಂದು ಕರೆದಾಗ, ಪುಲ ಅವರಿಬ್ಬರನ್ನೂ ತೀಕ್ಷ್ಣವಾಗಿ ಟೀಕಿಸಿದ್ದರು.

ಮರಾಠಿ ತಮಾಷಾ ಪರಿಷತ್ತಿಗೆ, ಮರಾಠಿ ವಾಙ್ಮಯ ಪರಿಷತ್ತಿಗೆ, ಮರಾಠಿ ನಾಟ್ಯ ಸಮ್ಮೇಳನಕ್ಕೆ, ಮರಾಠಿ ಸಾಹಿತ್ಯ ಸಮ್ಮೇಳನದ ಸುವರ್ಣ ಮಹೋತ್ಸವ ಅಧಿವೇಶನಕ್ಕೆ ಅವರು ಅಧ್ಯಕ್ಷರಾಗಿದ್ದರು. ಅವರಿಗೆ ಪದ್ಮಶ್ರೀ, ಪದ್ಮವಿಭೂಷಣ ಪ್ರಶಸ್ತಿಗಳು ಬಂದಿದ್ದವು. ಪುಣೆ ವಿ.ವಿ. ಅಲ್ಲದೆ, ರವೀಂದ್ರ ಭಾರತಿಯಿಂದಲೂ ಗೌರ ಡಾಕ್ಟರೇಟ್ ಪಡೆದಿದ್ದರು. ಮಧ್ಯಪ್ರದೇಶ ಸರ್ಕಾರದ ಕಾಳಿದಾಸ ಸಮ್ಮಾನವನ್ನೂ ಅವರು ಗಳಿಸಿದ್ದರು. ಕೇಂದ್ರ ಸಾಹಿತ್ಯ ಅಕಾದೆಮಿಯ ಫೆಲೋ ಆಗಿದ್ದ ಅವರು, ಕೇಂದ್ರ ಸಂಗೀತ ನಾಟಕ ಅಕಾದೆಮಿಯ ಉಪಾಧ್ಯಕ್ಷರಾಗಿಯೂ ಕೆಲಕಾಲ ಕೆಲಸ ಮಾಡಿದರು. ಅವರಿಗೆ 'ಗಡಕರಿ ಪ್ರಶಸ್ತಿ'ಯೂ ದೊರೆತಿತ್ತು. 'ಪುಲ ದೇಶಪಾಂಡೆ ಪ್ರತಿಷ್ಠಾನ'ದ ಮೂಲಕ ಹಲವಾರು ಸಾಮಾಜಿಕ ಹಾಗೂ ಸಾಂಸ್ಕೃತಿಕ ಯೋಜನೆಗಳಿಗೂ ನೆರವು ನೀಡಿದ್ದರು. 'ಮಹಾರಾಷ್ಟ್ರ ಭೂಷಣ' ಗೌರವವೂ ಅವರದಾಗಿತ್ತು. ಈ ಪ್ರಶಸ್ತಿಗಳ ಪಟ್ಟಿ ಬಹಳ ಉದ್ದವಾದದ್ದು.

ಪುಲ ತಮ್ಮ ಮಾತೃಭಾಷೆ ಮರಾಠಿಯನ್ನು ಬಹುವಾಗಿ ಪ್ರೀತಿಸಿದರು. ಆರಾಧಿಸಿದರು. ಆದರೆ ಭಾಷೆಯ ವಿಷಯದಲ್ಲಿ ಅವರೆಂದೂ ಅಂಧರಾಗಿರಲಿಲ್ಲ ! 'ಸರ್ವಭಾಷಾ ಸರಸ್ವತಿ' ಎಂಬ ಕನ್ನಡ ಕವಿಯೊಬ್ಬನ ಮಾತನ್ನು ನಿಜವಾಗಿಯೂ ನಂಬಿ ನಡೆದಿದ್ದವರು ಅವರು. ಅವರ ಸ್ನೇಹಿತರೊಬ್ಬರು ಶುದ್ಧ ಮರಾಠಿಯ ಆರಾಧಕರು. ಬೇರೆ ಭಾಷೆಯ ಪದಗಳನ್ನು ಬಳಸುವದಕ್ಕೆ ತೀವ್ರ ಆಕ್ಷೇಪ ಮಾಡುತ್ತಿದ್ದರು. ಒಂದು ಸಲ ಪುಲ, ಅವರನ್ನು ಹೋಟೆಲಿಗೆ ಕರೆದರು. ಅಲ್ಲಿ ಅವರು ಹೇಳಿದರಂತೆ 'ನೋಡಪ್ಪಾ, ನನಗೆ ಈಗ ಒಳ್ಳೆಯ ಇಡ್ಲಿ ಬೇಕಾಗಿದೆ. ಇದನ್ನು ಶುದ್ಧ ಮರಾಠಿಯಲ್ಲಿ ಹೇಗೆ ಹೇಳುತ್ತೀಯ ಹೇಳು.''

ಪುಲ ಅವರ ಅನೇಕ ಕೃತಿಗಳು ಕನ್ನಡಕ್ಕೂ ಬಂದಿವೆ. ಆದರೆ ಆ ಅನುವಾದಗಳಿಂದ ಪುಲ ಹಿರಿಮೆ ಕನ್ನಡಿಗರಿಗೆ ತಿಳಿಯುವುದಿಲ್ಲ ! ಇದಕ್ಕೆ ಕಾರಣ ಹುಡುಕುವುದು ಕಷ್ಟವಲ್ಲ. ಅವರೇ ಹೇಳಿದ್ದಾರೆ : ''ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಭಾಷಾಂತರ ಮಾಡುವುದೆಂದರೆ ಕೈಗೆ ಕೈಚೀಲ ಹಾಕಿಕೊಂಡು ಪ್ರಿಯತಮೆಯ ಗಲ್ಲ ಸವರಿದಂತೆ !'' ಅದರಲ್ಲಿ ನಿಜವಾದ ಸ್ಪರ್ಶಸುಖ ಸಿಕ್ಕುವುದಿಲ್ಲ !

ಪುಲ ತೀರಿಹೋದರು, ನಿಜ. ಆದರೆ ಪುಲ ಖ್ಯಾತಿ ದಂತಕಥೆಯಾಗಿ ಬೆಳೆಯುತ್ತಲೇ ಇದೆ. ಅಂಥವರಿದ್ದರು ಎಂಬ ಮಾತನ್ನು ನಂಬುವುದೇ ಕಷ್ಟವಾಗುತ್ತದೆ, ಮುಂದಿನ ತಲೆಮಾರಿನವರಿಗೆ.

ಕೃಪೆ : ಸಾರಸ್ವತ ಗೀತಾ ಬುಕ್ ಹೌಸ್, ಮೈಸೂರು


## MATRIMONIAL

Wanted Kannada Smartha Brahmin (HK) employed Girl for 34 Yrs, 5'10" Boy based at Bangalore, employed as SWE in MNC.

Contact : 080-26607551 (Bangalore)
0251 - 2821107 (Domiivli)
9892508022

****

**Wanted Suitable Hoysala Karnataka Brahmin Girl (Working)**

Name : Venkatesh Shivaswamy
Date of Birth : 21st July 1974
Qualification : Diploma in Electronics
Height : 5'10"
Birth Star : Makha Nakshatra
Gotra : Kashyapasa Gotra

Working in Private HCL Company as Channel Consultant in Andheri, Mumbai.
Contact No. : 93224 88999

# ಹೊರನಾಡ ಕನ್ನಡಿಗರ ಸಾಹಸ ಸಾಧನೆ

(ಕಳೆದ ಸಂಚಿಕೆಯಿಂದ)

- ಡಾ. ಜಿ.ಎನ್. ಉಪಾಧ್ಯ

ಕಾರವಾರವೇ ಕರ್ನಾಟಕದ ಅತ್ಯುತ್ತಮ ಬಂದರವೆಂಬ ಬಗೆಗೆ ಅವರು ಆಧಾರ ಸಹಿತವಾಗಿ ಬರೆದ ಇಂಗ್ಲೀಷ್ ಹೊತ್ತಿಗೆಯಲ್ಲಿ ಪ್ರಕಟಿಸಿದಂತೆ ಕರ್ನಾಟಕ ರಾಜ್ಯದ ವೈಶಿಷ್ಟ್ಯಗಳು ಎಲ್ಲೆಲ್ಲಿ ಯಾತ ಕೋಸುಗ ತಲೆ ಎತ್ತಬೇಕೆಂಬುದನ್ನು ಜನರಿಗೆ ಮನದಟ್ಟು ಮಾಡಿಕೊಡುತ್ತಿದ್ದರು. ಕರ್ನಾಟಕ ರಾಜ್ಯ ಪ್ರಾರಂಭೋತ್ಸವದಲ್ಲಿ ಅವರು ಮುಖ್ಯ ಪಾತ್ರವಹಿಸಿದರು., ಕರ್ನಾಟಕದ ಕುಲಪುರೋಹಿತ ಆಲೂರು ವೆಂಕಟರಾಯರೊಂದಿಗೆ ನಿಕಟ ಸಂಪರ್ಕ ವನ್ನಿಟ್ಟುಕೊಂಡಿದ್ದರು. ಮಂಗಳವೇಡೆ ಶ್ರೀನಿವಾಸರಾವ್ ಬುರ್ಲಿ ಬಿಂದು ಮಾಧವ, ಆಲೂರ ವೆಂಕಟರಾವ್, ಹುಯಿಲ ಗೋಳ ನಾರಾಯಣರಾಯರು ಮೊದಲಾದ ದಿಗ್ಗಜರನ್ನು ಸೇರಿಸಿ ಹಂಪೆಯಲ್ಲಿ ಕರ್ನಾಟಕ ರಾಜ್ಯೋದಯವನ್ನು ಭವ್ಯವಾಗಿ ಆಚರಿಸಿದೆವು'' (ನೋಡಿ : ಕರ್ನಾಟಕ ಏಕೀಕರಣದ ಹಾದಿಯಲ್ಲಿ, 1986. ಪುಟ 141-142). ಮುಂಬೈಯಿಂದ ಪ್ರಕಟವಾಗುತ್ತಿದ್ದ 'ನುಡಿ' ಪತ್ರಿಕೆಯಲ್ಲಿ ಕರ್ನಾಟಕ ಏಕೀಕರಣದ ಕುರಿತು ಅನೇಕ ಲೇಖನಗಳನ್ನು ಬರೆದರು. ಪ್ರಶ್ನಾವಳಿಯನ್ನು ನೀಡಿ ಜನಾಭಿಪ್ರಾಯವನ್ನು ಸಂಗ್ರಹಿಸಿದರು. ಮುಂಬೈ ಸರಕಾರದೊಂದಿಗೆ, ಏಕೀಕರಣದ ಕುರಿತು ಸತತ ಸಂಪರ್ಕವನ್ನಿಟ್ಟುಕೊಂಡು ಅದರ ರೂವಾರಿಯಾಗಿ ಕೆಲಸ ಮಾಡಿದರು. ಹೀಗಾಗಿ ಕರ್ನಾಟಕ ಏಕೀಕರಣದಲ್ಲಿ ಪಾಲ್ಗೊಂಡ ಹಿರಿಯರೆಲ್ಲ ಕಲ್ಲೂರ ಅವರ ಕಾರ್ಯಶೈಲಿಯನ್ನು ಮೆಚ್ಚಿಕೊಂಡಿದ್ದರು.

1956 ನವೆಂಬರ್ ಒಂದರಂದು ರಾಜ್ಯಗಳ ಪುನರ್ವಿಂಗಡೆಯಾಗಿ ವಿಶಾಲ ಮೈಸೂರು ರಾಜ್ಯ ಅಸ್ತಿತ್ವಕ್ಕೆ ಬಂದರೂ ಏಕೀಕರಣ ಹೋರಾಟದ ಮುಂಚೂಣಿಯಲ್ಲಿದ್ದವರ ಕಲ್ಪನೆಯ ಅಖಂಡ ಕರ್ನಾಟಕವಲ್ಲ ಎಂಬ ಕಳವಳವಿತ್ತು. ಈ ಸಂದರ್ಭದಲ್ಲಿ 'ಮೈಸೂರು' ಎಂಬ ಹೆಸರೂ ಅನೇಕರಿಗೆ ಸರಿಬರಲಿಲ್ಲ. ಕಲ್ಲೂರರು ಎಲ್ಲೆಡೆ 'ಮೈಸೂರು ರಾಜ್ಯ' ಅಖಂಡವಾಗಿ 'ಕರ್ನಾಟಕ'ವೆಂದಾಗ ಬೇಕೆಂದು 1957ರಿಂದ 1973ರ ವರೆಗೂ ಹೋರಾಟ ನಡೆಸಿದರು. ಅನೇಕ ಮಂದಿ ಮುಂಬೈ ಕನ್ನಡಿಗರು ಕೃಷ್ಣಕುಮಾರ ಕಲ್ಲೂರರ ಕಾರ್ಯಕ್ಕೆ ಬೆಂಬಲ ವ್ಯಕ್ತಪಡಿಸಿದರು ಮೈಸೂರು - ಮಹಾರಾಷ್ಟ್ರ ಗಡಿವಿವಾದವನ್ನು ಹೇಗೆ ಬಗೆಹರಿಸಬಹುದೆಂಬುದನ್ನು ಕೇಂದ್ರ,ರಾಜ್ಯ ಸರಕಾರಗಳಿಗೂ ಕಲ್ಲೂರರು ಸಲಹೆ ನೀಡಿ ಕನ್ನಡಿಗರ ಹಿತವನ್ನು ಕಾಯುವ ಕೆಲಸ ಮಾಡಿದರು. 1973 ನವೆಂಬರ್ ಒಂದರಂದು ಇಂದಿನ ಕರ್ನಾಟಕ ರಾಜ್ಯ ಉದಯವಾಯಿತು. ಮುಂಬೈ 1956ರ ಅನಂತರ ಹೊರನಾಡಾಗಿ ಪರಿಣಮಿಸಿದರೂ ಇಲ್ಲಿನ ಕನ್ನಡಿಗರು ಎದೆಗುಂದದೆ ತಮ್ಮ ಅಸ್ಮಿತೆಯನ್ನು ಉಳಿಸಿಕೊಂಡು ಬರಲು ನಿರಂತರವಾಗಿ ಹೋರಾಟ ನಡೆಸುತ್ತಾ ಬಂದಿದ್ದಾರೆ.

ಇವತ್ತು ಮುಂಬಯಿ ಒಂದು ಪ್ರಮುಖ ವಾಣಿಜ್ಯ ಮಹಾನಗರ, ಇದು ಈ ರಾಷ್ಟ್ರದ ಆರ್ಥಿಕ ಆಗುಹೋಗುಗಳ ಕೇಂದ್ರಬಿಂದುವೂ ಹೌದು. ಸುಮಾರು 15-16 ಲಕ್ಷ ಕನ್ನಡಿಗರು ಇಲ್ಲಿ ನೆಲೆಸಿದ್ದಾರೆ. ಇಲ್ಲಿರುವ ಎಂಬತ್ತು ಪ್ರತಿಶತ ಹೋಟೇಲುಗಳು ಕನ್ನಡಿಗರದು ಎಂಬುದು ಅಭಿಮಾನದ ಸಂಗತಿ ಮುಂಬಯಿಯಲ್ಲಿ ನೂರಾರು ಕನ್ನಡ ಸಂಘ, ಸಂಸ್ಥೆಗಳು, ಶಾಲೆ ಕಾಲೇಜು ವಿಶ್ವವಿದ್ಯಾಲಯದ ಕನ್ನಡ ವಿಭಾಗ ಹೀಗೆ ದಿನವಹಿ ಒಂದಲ್ಲ ಒಂದು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿರುವದು ಕನ್ನಡಿಗರ ಸಾಂಸ್ಕೃತಿಕ ಅಸ್ಮಿತೆಯನ್ನು ಬಿಂಬಿಸುತ್ತವೆ. ಕರ್ನಾಟಕದ ರಾಜಧಾನಿ ಬೆಂಗಳೂರನ್ನು ಬಿಟ್ಟರೆ ಅತಿಹೆಚ್ಚು ಕನ್ನಡಿಗರಿರುವ ಪ್ರದೇಶ ಮುಂಬಯಿ!

ಈ ವಾಣಿಜ್ಯ ಮಹಾನಗರದ ಕನ್ನಡ ಸಂಸ್ಕೃತಿಗೆ ತನ್ನದೇ ಆದ ಒಂದು ಚಾರಿತ್ರಿಕ ಮಹತ್ವವಿದೆ

ಬ್ರಿಟಿಷರು ತಮ್ಮ ಆಡಳಿತೆಯ ಅನುಕೂಲಕ್ಕಾಗಿ ಭಾರತವನ್ನು ಹಲವು ಪ್ರಾಂತಗಳಾಗಿ ವಿಭಜಿಸಿದರು. ಇದರಿಂದಾಗಿ ಉತ್ತರ ಕರ್ನಾಟಕದ ನಾಲ್ಕು ಜಿಲ್ಲೆಗಳು ಮುಂಬಯಿ ಪ್ರಾಂತಕ್ಕೆ ಸೇರಿಕೊಂಡವು. ಅಂದಿನಿಂದಲೇ ಮುಂಬೈಗೆ ಕನ್ನಡದ ಸಂಪರ್ಕ ಒದಗಿ ಬಂದಿತು. ಕ್ರಿ.ಶ. ೧೮೫೭ರಲ್ಲಿ ರಾಷ್ಟ್ರದಲ್ಲೇ ಮೊದಲಬಾರಿಗೆ ಮೂರು ವಿಶ್ವವಿದ್ಯಾಲಯಗಳು ಸ್ಥಾಪನೆಯಾದವು. ಅವುಗಳಲ್ಲಿ ಮುಂಬಯಿ ಸಹ ಒಂದು. ಈ ಕಾರಣದಿಂದ ವಾಣಿಜ್ಯ ನಗರವಾಗಿದ್ದ ಮುಂಬಯಿ ಶೈಕ್ಷಣಿಕ ಕೇಂದ್ರವೂ ಆಯಿತು. ಉತ್ತರ ಕರ್ನಾಟಕದ ಜನ ಸಹಜವಾಗಿಯೇ ಇತ್ತ ಮುಖಮಾಡುವಂತಾಯಿತು. ಇನ್ನೊಂದು ಕಡೆ ಕಡಲ ಸಂಚಾರ ಸಂಪರ್ಕದಿಂದಾಗಿ ಕರಾವಳಿ ಕರ್ನಾಟಕದ ಜನ ನಾನಾ ಕಾರಣಗಳಿಗೆ ಮುಂಬಯಿಗೆ ವಲಸೆ ಬಂದರು. ಕ್ರಮೇಣ ಇಲ್ಲಿ ಕನ್ನಡಿಗರ ಸಾಂಸ್ಕೃತಿಕ ಚಟುವಟಿಕೆಗಳು ಬಲಗೊಂಡವು. ಮುಂಬಯಿ ಕನ್ನಡಿಗರ ಸಾಂಸ್ಕೃತಿಕ ಸಾಧನೆಗೆ ಗಟ್ಟಿ ಒಂದೂವರೆ ಶತಮಾನದ ಇತಿಹಾಸವಿದೆ. ೧೯೫೦, ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಮಹತ್ವದ ವರ್ಷ. ರಾಷ್ಟ್ರಕವಿ ಗೋವಿಂದ ಪೈ ಅವರ ಅಧ್ಯಕ್ಷತೆಯಲ್ಲಿ ಮುಂಬೈಯಲ್ಲಿ ನಡೆದ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ವಿನಾಯಕ ಕೃಷ್ಣಗೋಕಾಕರು ನವ್ಯ ಕಾವ್ಯದ ಆರಂಭವನ್ನು ಘೋಷಿಸಿದರು ಈ ಸಾಹಿತ್ಯ ಸಮ್ಮೇಳನದಿಂದ ಕನ್ನಡ ಕಾವ್ಯ ವಾಹಿನಿಯ ಗತಿಯೇ ಬದಲಾದುದು ಚಾರಿತ್ರಿಕ ಸತ್ಯ.

೧೯೫೬ ರ ಅನಂತರ ಮುಂಬಯಿ, ಕರ್ನಾಟಕದ ಜೊತೆಗಿನ ಆಡಳಿತಾತ್ಮಕ ಕೊಂಡಿಯನ್ನು ಕಳಚಿಕೊಂಡಿತು. ಈ ಭಾಗದಲ್ಲಿ ಕನ್ನಡವನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಮತ್ತಷ್ಟು ಹೆಚ್ಚಿತು. ಇಮಾರತಿ ವರದರಾಜ ಆದ್ಯ, ಎ.ಎಸ್.ಕೆ.ರಾವ್ ಮೊದಲಾದವರು ಕನ್ನಡದ ಏಳಿಗೆಗೆ ಟೊಂಕಕಟ್ಟಿ ನಿಂತರು. ಅನೇಕ ಕನ್ನಡ ಸಂಘ ಸಂಸ್ಥೆಗಳು ಶಾಲೆ ಕಾಲೇಜುಗಳು ತಲೆ ಎತ್ತಿ ಕನ್ನಡ ಸಂಸ್ಕೃತಿಯ ವಿಕಾಸನದ ಕಾರ್ಯಕ್ರಮವನ್ನು ನಡೆಸಿದವು. ಇದೇ ಹೊತ್ತಿಗೆ ಮುಂಬೈಯಲ್ಲಿ ವಿಪುಲ ಸಾಹಿತ್ಯ ಕೃಷಿಯೂ ನಡೆಯಿತು.

ಮುಂಬಯಿಯಲ್ಲಿ ಕನ್ನಡ ಕಾವ್ಯವನ್ನು ಮುನ್ನಡೆಸಿದ ಹಿರಿಯರಲ್ಲಿ ಕವಿ ವಿ.ಜಿ.ಭಟ್ಟ ಅವರೂ ಒಬ್ಬರು. ಹಾಸ್ಯ, ಅಣಕ, ಸಾಹಿತ್ಯವನ್ನು ಸಮೃದ್ಧಗೊಳಿಸಿದ ಸಾಧನೆಯಿಂದ ಅವರು ಇಂದಿಗೂ ನಮ್ಮ ನೆನಪಿನಾಳದಲ್ಲಿ ಉಳಿದಿದ್ದಾರೆ. ಬಿ.ಎ.ಸನದಿ, ಯಶವಂತ ಚಿತ್ತಾಲ,ವ್ಯಾಸರಾಯಬಲ್ಲಾಳ, ಜಯಂತ ಕಾಯ್ಕಿಣಿ, ವ್ಯಾಸರಾವ್ ನಿಂಜೂರ್ ಈ ಮೊದಲಾದ ಪ್ರಮುಖ ಸಾಹಿತಿಗಳನ್ನು ಕನ್ನಡಕ್ಕೆ ಮುಂಬಯಿ ಕೊಟ್ಟ ಕಾಣಿಕೆ ಎಂದರೆ ತಪ್ಪಾಗದು. ಇವರು ಬರೆದ ಕಾವ್ಯ, ಕಾದಂಬರಿ, ಕಥೆ, ಜನಮಾನಸದಲ್ಲಿ ಗಟ್ಟಿಯಾಗಿ ನೆಲೆನಿಂತು ಮುಂಬಯಿಯ ಬಗೆಗೆ ಕನ್ನಡಿಗರು ಅಭಿಮಾನ ಮೂಡುವಂತೆ ಆಗಿದೆ.

ಡಾ. ಬಿ.ಎ.ಸನದಿ : ಹೊಸಗನ್ನಡ ಸಾಹಿತ್ಯದ ಯಾವುದೇ ಒಂದು ಪಂಥಕ್ಕೂ ಹೆಗಲು ಕೊಡದೇ ಆ ಎಲ್ಲ ಸಂದರ್ಭಗಳಲ್ಲಿ ಸಮಕಾಲೀನ ಪ್ರಪಂಚಕ್ಕೆ ಸ್ಪಂದಿಸುತ್ತಾ ಬಂದಿರುವ ಬಿ.ಎ.ಸನದಿ ಅವರು ಕನ್ನಡದ ಹಿರಿಯ ಕವಿಗಳಲ್ಲಿ ಒಬ್ಬರು. ಶಿಕ್ಷಕರಾಗಿ ಪತ್ರಕರ್ತರಾಗಿ ಸಮಾಜ ಸೇವಕರಾಗಿ ಆಕಾಶವಾಣಿಯಲ್ಲಿ ಉನ್ನತ ಅಧಿಕಾರಿಯಾಗಿ ದೇಶದ ಉದ್ದಗಲಕ್ಕೂ ಓಡಾಡಿದ ಸನದಿ ಅವರು ಕಾವ್ಯ, ಕಥೆ, ವಿಮರ್ಶೆ, ಶಿಶು ಸಾಹಿತ್ಯ ಮೊದಲಾದ ಸಾಹಿತ್ಯ ಪ್ರಕಾರಗಳಲ್ಲಿ ಕೆಲಸ ಮಾಡಿದ್ದಾರೆ. ಕನ್ನಡ, ಉರ್ದು, ಹಿಂದಿ, ಮರಾಠಿ, ಸಂಸ್ಕೃತ ಇಂಗ್ಲಿಷ್ ಮೊದಲಾದ ಭಾಷೆಗಳಲ್ಲಿ ಹಿಡಿತ ಸಾಧಿಸಿರುವ ಅವರ ರಾಷ್ಟ್ರೀಯ ಭಾವೈಕ್ಯತೆಗೊಂದು ಉತ್ತಮ ನಿದರ್ಶನ. ಸನದಿ ಅವರ ಕಾವ್ಯ ಮುಖ್ಯವಾಗಿ ಮನುಷ್ಯ ಕೇಂದ್ರಿತವಾದುದು. ಹಿರಿಯ ವಿಮರ್ಶಕ ಡಾ.ಗೌರೀಶರು ಈ ಕಾರಣಕ್ಕಾಗಿಯೇ ಅವರನ್ನು 'ಮಾನವ್ಯ ಕವಿ' ಎಂದು ಕರೆದಂತೆ ತೋರುತ್ತದೆ. ಹಲವು ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿರುವ ಬಿ.ಎ.ಸನದಿ ಅವರು ಮಾನವ

ಸಂವೇದನೆಯೊಂದೇ ಮುಖ್ಯ ಎಂದು ನಂಬಿ ನೆಚ್ಚಿ ಬರೆಯುತ್ತಾ ಬಂದಿದ್ದಾರೆ. ಆಶಾಕಿರಣದಿಂದ ನಮ್ಮ ಪ್ರೀತಿ ಕೃತಿಯವರೆಗೆ ಹದಿನೇಳು ಕವಿತಾ ಸಂಕಲನಗಳನ್ನು ಹೊರತಂದು ಕನ್ನಡ ಸಾಹಿತ್ಯದಲ್ಲಿ ತಮ್ಮ ಛಾಪನ್ನು ಮೂಡಿಸಿದ್ದಾರೆ.

ಅರವಿಂದ ನಾಡಕರ್ಣಿ : ಕನ್ನಡದಲ್ಲಿ, ನವ್ಯಕಾವ್ಯವನ್ನು ವಿನಾಯಕರು ಹುಟ್ಟುಹಾಕಿದರೆ ಅದಕ್ಕೆ ಅಡಿಗರು ನೀರೆರೆದು ಪೋಷಿಸಿ ಮಹಾವೃಕ್ಷವನ್ನಾಗಿ ಮಾಡಿದರು. ಅನಂತರ ಈ ತೇರಿನ ಮಿಳಿಯನ್ನು ಎಳೆದವರಲ್ಲಿ ಅರವಿಂದ ನಾಡಕರ್ಣಿ ಅವರು ಪ್ರಮುಖರು. ಅಡಿಗರನ್ನು ಬಿಟ್ಟರೆ ನಮ್ಮ ಗಮನ ಸೆಳೆದ ನವ್ಯ ಕವಿ ನಾಡಕರ್ಣಿ. ಅವರ ಕಾವ್ಯದಲ್ಲಿ ದಟ್ಟವಾಗಿ ಕೆನೆಗಟ್ಟಿರುವ ಜೀವಂತಿಕೆ, ನಗರಪ್ರಜ್ಞೆ ವೈಶಿಷ್ಟ್ಯಪೂರ್ಣವಾದುದು. ಕಳೆದ ಅನೇಕ ದಶಕಗಳಿಂದ ಕಾವ್ಯ ಕೃಷಿಯಲ್ಲಿ ತೊಡಗಿರುವ ನಾಡಕರ್ಣಿ ಅವರು ನವ್ಯಕಾವ್ಯವನ್ನೇ ಗಟ್ಟಿಯಾಗಿ ನಡೆಸಿಕೊಂಡು ಬಂದವರು. ಕಾವ್ಯಾರ್ಪಣದಿಂದ 'ಗೊಂಡೋಲಾ ನಿಲ್ಲು' 'ಎರಡು ಧ್ರುವಗಳು' ಕೃತಿಯವರೆಗೆ ಕವಿ ನಡೆದು ಬಂದ ರೀತಿಯ ಅರಿವಾಗುತ್ತದೆ. ಅನೇಕ ಪ್ರಶಸ್ತಿಗಳನ್ನು ಪಡೆದಿರುವ ನಾಡಕರ್ಣಿ ನವ್ಯಕಾವ್ಯದ ಗಟ್ಟಿ ಧ್ವನಿ.

ವ್ಯಾಸರಾಯ ಬಲ್ಲಾಳ : ಸದ್ಯ ಬೆಂಗಳೂರಲ್ಲಿ ನೆಲೆನಿಂತಿರುವ ವ್ಯಾಸರಾಯ ಬಲ್ಲಾಳರು ಮುಂಬಯಿಯನ್ನು ಕಾರ್ಯಕ್ಷೇತ್ರವಾಗಿ ಮಾಡಿಕೊಂಡು ಸಾಹಿತ್ಯ ಕೃಷಿ ನಡೆಸಿದವರು. ಕನ್ನಡದ ಪ್ರಮುಖ ಕಾದಂಬರಿಕಾರರಲ್ಲಿ ಅವರೂ ಒಬ್ಬರು. ಪತ್ರಿಕೋದ್ಯಮಿಯಾಗಿ, ಸಣ್ಣ ಕತೆಗಾರರಾಗಿ, ಕಾದಂಬರಿಕಾರರಾಗಿ ಬಲ್ಲಾಳರು ಸಾಧಿಸಿದ ಸಾಧನೆ ಮಹತ್ವದ್ದು. ಅವರ ಬಂಡಾಯ, ವಾತ್ಸಲ್ಯಪಥ, ಆಕಾಶಕ್ಕೊಂದು ಕಂದೀಲು, ಹೇಮಂತಗಾನ, ತ್ರಿಕಾಲ ಮೊದಲಾದ ಕೃತಿಗಳು ಕನ್ನಡ ಸಾಹಿತ್ಯ ಲೋಕದಲ್ಲಿ ತುಸು ಭಿನ್ನವಾದವುಗಳು. ಮನುಷ್ಯ ಸಂಬಂಧ, ನಗರ ಪ್ರಜ್ಞೆ, ನಗರದ ಮಧ್ಯಮ ವರ್ಗದ ಬದುಕಿನ ಹೊಯ್ದಾಟ, ಕೈಗಾರಿಕಾ ಮನಃಶಾಸ್ತ್ರ ಇನ್ನೂ ಅನೇಕ ಅಂಶಗಳು ಅವರ ಕೃತಿಗಳಲ್ಲಿ ಸೊಗಸಾಗಿ ಅನಾವರಣಗೊಂಡಿವೆ.

ಯಶವಂತ ಚಿತ್ತಾಲ: ಕನ್ನಡದ ಅಗ್ರಮಾನ್ಯ ಕಾದಂಬರಿಕಾರರಲ್ಲಿ ಚಿತ್ತಾಲರೂ ಒಬ್ಬರು. ಅತ್ಯುತ್ತಮ ಸಣ್ಣ ಕತೆಗಾರ ಮಾಸ್ತಿ ಅವರ ಅನಂತರ ಆ ಪರಂಪರೆಯನ್ನು ಸಮರ್ಥವಾಗಿ ನಡೆಸಿಕೊಂಡು ಬಂದ ಕತೆಗಾರರಲ್ಲಿ ಅವರೂ ಒಬ್ಬರು. ಕಾವ್ಯದಲ್ಲಿ ನಾಡಕರ್ಣಿ, ಕಾದಂಬರಿಯಲ್ಲಿ ಚಿತ್ತಾಲ ಬಲ್ಲಾಳರಂತೆ ನಗರದ ಬದುಕಿನ ಸಂಘರ್ಷವನ್ನು ಚಿತ್ರಿಸಿದವರು ವಿರಳ. ದಟ್ಟವಾದ ವೈಚಾರಿಕತೆ, ಮನೋವಿಶ್ಲೇಷಣೆಯ ಮಾಧ್ಯಮದಲ್ಲಿಯೂ ಅವರ ಶಿಕಾರಿ, ಛೇದ ಕೇಂದ್ರವೃತ್ತಾಂತ, ಪುರುಷೋತ್ತಮ ಮೊದಲಾದ ಕಾದಂಬರಿಗಳು ನಮಗೆ ಆಪ್ತವಾಗುತ್ತವೆ. ಕನ್ನಡದ ನವ್ಯ ಕಾದಂಬರಿಕಾರರಲ್ಲಿ ಅವರದು ಮೊದಲ ಹೆಸರು. ಕತೆಗಾರರಾಗಿಯೂ ಚಿತ್ತಾಲರು ಸೈ ಎನಿಸಿಕೊಂಡಿದ್ದಾರೆ. ಚಿತ್ತಾಲರ ಕೃತಿಗಳ ಕುರಿತು ಗಂಭೀರವಾದ ವಿಮರ್ಶೆ, ಚರ್ಚೆ ಇನ್ನಷ್ಟು ನಡೆಯಬೇಕಾಗಿದೆ.

ಡಾ. ವ್ಯಾಸರಾವ್ ನಿಂಜೂರ್: ಹೊರನಾಡಿನಲ್ಲಿದ್ದು ಕೊಂಡು ಸತ್ವಪೂರ್ಣವಾದ ಕೃತಿಗಳನ್ನು ಕನ್ನಡ ವಾಙ್ಮಯಕ್ಕೆ ನೀಡಿದ ಡಾ. ನಿಂಜೂರರ ಜೀವನ ಸಾಧನೆ ಅನೇಕ ದೃಷ್ಟಿಯಿಂದ ನಮ್ಮ ಗಮನ ಸೆಳೆಯುತ್ತದೆ.ಸಾಹಿತ್ಯ ಹಾಗೂ ವಿಜ್ಞಾನ ಇವೆರಡನ್ನೂ ಸಮ ಸಮವಾಗಿ ನಡೆಸಿಕೊಂಡು ಬಂದ ಅವರು ಈ ಉಭಯ ಕ್ಷೇತ್ರಗಳಲ್ಲಿಯು ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ. ಉಸಿರು, ಚಾಮುಂಡೇಶ್ವರಿ ಭವನ ಅವರ ಹೆಸರಾಂತ ಕಾದಂಬರಿಗಳು. ಸಣ್ಣ ಕತೆಗಾರರಾಗಿ ಅವರು ತಮ್ಮ ಭಿನ್ನದನಿಯನ್ನು ವ್ಯಕ್ತಪಡಿಸಿದ್ದಾರೆ.

ಜಯಂತ ಕಾಯ್ಕಿಣಿ: ಕವಿಯಾಗಿ, ಕತೆಗಾರರಾಗಿ ಜಯಂತ ಕಾಯ್ಕಿಣಿ ಅವರು ಈಗಾಗಲೇ ಕನ್ನಡಿಗರಿಗೆ ಚಿರಪರಿಚಿತರಾಗಿದ್ದಾರೆ. ಇಲ್ಲಿಯ ಅನೇಕ ಯುವ ಬರೆಹಗಾರರಿಗೆ ಜಯಂತ್ ಅವರು ಒಂದು ಮಾದರಿ. ಮತ್ತೊಂದು ರೀತಿಯಲ್ಲಿ ಮಾರ್ಗದರ್ಶಿ. ದಗಡೂ ಪರಬನ ಅಶ್ವಮೇಧ, ಅಮೃತಬಳ್ಳಿ ಕಷಾಯ, ರಂಗದಿಂದೊಂದಷ್ಟು ದೂರ, ನೀಲಿ ಮಳೆ, ಬಣ್ಣದ ಕಾಲು, ತೂಫಾನ್ ಮೇಲ್ ಮೊದಲಾದವು ಅವರ ಪ್ರಮುಖ ಕೃತಿಗಳು. ನಗರ ಜಾನಪದದ ವೈಶಿಷ್ಟ್ಯಗಳನ್ನು ಜಯಂತ್ ತಮ್ಮ ಕಥೆಗಳಲ್ಲಿ ಮನೋಜ್ಞವಾಗಿ ಸೆರೆಹಿಡಿದಿದ್ದಾರೆ. ಸಾಕಷ್ಟು ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿರುವ ಕಾಯ್ಕಿಣಿ ಅವರು ಕನ್ನಡದ ಈ ತಲೆಮಾರಿನ ಮಹತ್ವದ ಲೇಖಕರಲ್ಲಿ ಒಬ್ಬರು.

ಮುಂಬಯಿ ಕನ್ನಡ ವಾಙ್ಮಯ ಇತಿಹಾಸವನ್ನು ಈ ಕಿರುಲೇಖನದ ವ್ಯಾಪ್ತಿಯಲ್ಲಿ ಇರಿಸುವುದು ಅಸಾಧ್ಯದ ಮಾತು. ಇದು ಈ ಲೇಖನದ ಮಿತಿಯೂ ಹೌದು. ಕನ್ನಡ ವಾಙ್ಮಯವನ್ನು ಶ್ರೀಮಂತಗೊಳಿಸುವಲ್ಲಿ ಇನ್ನನೇಕರು ಶ್ರಮಿಸಿದ್ದಾರೆ. ಆ ನಿಟ್ಟಿನಲ್ಲಿ ಕೆಲವರು, ಮುಂದಡಿ ಇಟ್ಟಿದ್ದಾರೆ. ಸಂಶೋಧನಾ ಕ್ಷೇತ್ರದಲ್ಲಿ ಭೀಮರಾವ ಚಿಟಗುಪ್ಪಿ, ಜೆ.ಬಿ. ಮೊರಾಯಿಸ್, ಡಾ. ಹಾವನೂರ, ಡಾ. ತಾಳ್ತಜೆ ವಸಂತಕುಮಾರ, ಡಾ.ಕಾರ್ನಾಡ್, ಡಾ. ಸಂಜೀವ ಶೆಟ್ಟಿ, ಡಾ. ಪ್ರಹ್ಲಾದ ಮುದ್ಗಲ್, ಚಿದಂಬರ ದೀಕ್ಷಿತ, ಡಾ. ಜಿ.ಎನ್ ಉಪಾಧ್ಯ ಮೊದಲಾದವರು ತಮ್ಮದೆ ಆದ ಕಾಣಿಕೆಯನ್ನು ನೀಡಿದ್ದಾರೆ. ಕಾವ್ಯ ಕ್ಷೇತ್ರದಲ್ಲಿ ಹೇಮಂತ ಕುಲಕರ್ಣಿ, ಚಿದಂಬರ ದೀಕ್ಷಿತ, ಕೋಡು ಭೋಜ ಶೆಟ್ಟಿ, ಡಾ. ಸುನೀತಾ ಶೆಟ್ಟಿ, ಡಾ. ಸುನೀತ ಉದ್ಯಾವರ, ಡಾ. ಸಂಜೀವ ಶೆಟ್ಟಿ ತುಳಸಿ ವೇಣುಗೋಪಾಲ್, ಡಾ. ಗಿರಿಜಾ ಶಾಸ್ತ್ರಿ, ಡಾ. ರಘುವೀರ ಭಟ್ ,ಶ್ರೀನಿವಾಸ ಜೋಕಟ್ಟೆ, ಜಿ.ಪಿ. ಕುಸುಮ, ಹಾ.ಮ.ಕನಕ, ಡಾ.ಜಿ.ವಿ.ಕುಲಕರ್ಣಿ, ಬಿ.ಎಸ್.ಕುರ್ಕಾಲ್, ಶಿಮುಂಜೆ ಪರಾರಿ, ರಾಮಮೋಹನ ಬಳ್ಕುಂಜೆ, ಅರುಷಾ ಶೆಟ್ಟಿ, ವಿವೇಕ ಶ್ಯಾನುಭಾಗ್, ಸಾ ದಯಾ, ಗೋಪಾಲ ತ್ರಾಸಿ, ಕುಮಾರ ಜೋಶಿ, ಸೀತಾರಾಮ ಶೆಟ್ಟಿ, ಎಂ.ಬಿ.ಕುಕ್ಯಾನ್, ಮರಿಯಪ್ಪ ನಾಟೇಕರ್ ಮೊದಲಾದವರು ಕೃಷಿ ಮಾಡಿದ್ದಾರೆ.

ಸಣ್ಣ ಕಥಾ ಕ್ಷೇತ್ರದಲ್ಲಿ ಮಿತ್ರ ವೆಂಕಟ್ರಾಜ್, ತುಳಸಿ ವೇಣುಗೋಪಾಲ, ಕೆ.ಟಿ.ವೇಣುಗೋಪಾಲ, ವಿದ್ಯಾಧರ ಮುತಾಲಿಕ ದೇಸಾಯಿ, ಡಾ.ನಿಂಜೂರ, ಶ್ರೀನಿವಾಸ ಜೋಕಟ್ಟೆ, ಡಾ. ಕಾರ್ನಾಡ್. ಓಂದಾಸ್ ಕಣ್ಣಂಗಾರ್, ರಾಮನಾಥ ಜೋಶಿ, ಸದಾನಂದ ಸುವರ್ಣ, ಜಯರಾಮ ಅಳ್ವ, ಡಾ. ಕರುಣಾಕರ ಶೆಟ್ಟಿ, ಡಾ. ಮಣಿಮಾಲಿನಿ, ಎಂ.ಬಿ.ಕುಕ್ಯಾನ್, ಉಮ ಪ್ರಭಾಕರ್, ಜಯಂತ್ ಕೈಕಿಣಿ ಪ್ರಿಯತಮ ಮೊದಲಾದವರು ಅನುವಾದ ಸಾಹಿತ್ಯದಲ್ಲಿ ರತ್ನಾಕರ ಶೆಟ್ಟಿ, ಎಚ್. ಕೆ. ಕರ್ಕೇರ, ಶಿಮುಂಜೆ ಪರಾರಿ, ವಾಸುಪುತ್ರನ್, ಮುಕುಂದ ಜೋಶಿ ಮೊದಲಾದವರು ನಮ್ಮ ಗಮನ ಸೆಳೆಯುತ್ತಾರೆ. ಯಕ್ಷಗಾನ ಕ್ಷೇತ್ರದಲ್ಲಿ ಪೊಲ್ಯ, ಎಚ್. ಬಿ. ಎಲ್. ರಾವ್, ರವಿ ಅಂಚನ್, ರಾಜು ಶೆಟ್ಟಿ ಕೊಲ್ಯಾರು, ಜಿ. ವಿ. ಶೆಟ್ಟಿಗಾರ ಮೊದಲಾದವರು ಕೆಲಸ ಮಾಡಿದ್ದಾರೆ. ಕಾದಂಬರಿ ಕ್ಷೇತ್ರದಲ್ಲಿ ರಮಾನಂದ ಅಮೀನ್, ಮುಕುಂದ ಜೋಶಿ, ಕೋಡುಭೋಜ ಶೆಟ್ಟಿ, ಡಾ. ಸುನೀತಿ ಉದ್ಯಾವರ, ಪತ್ರಿಕೋದ್ಯಮದಲ್ಲಿ ಎಂ. ವಿ. ಕಾಮತ್, ಕೆ. ಟಿ. ವೇಣುಗೋಪಾಲ, ಡಿ. ಕೆ. ಮೆಂಡನ್, ಚಂದ್ರಶೇಖರ ಪಾಲೆತ್ತಾಡಿ, ಈಶ್ವರ ಅಲೆವೂರು, ಭರತ್ ಕುಮಾರ್ ಪೊಲಿಪು, ಎಂ. ಎ. ಎನ್. ಪ್ರಸಾದ್ ಶ್ರೀನಿವಾಸ ಜೋಕಟ್ಟೆ, ವಸಂತ ಕಲಕೋಟಿ, ಅಶೋಕ ಸುವರ್ಣ, ರಾಮಚಂದ್ರ ಉಚ್ಚಿಲ್, ಶ್ರೀಪತಿ ಚಂಪಾ, ಎಂ. ಬಿ. ಕುಕ್ಯಾನ್ ಹೀಗೆ ಈ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಹರಟೆ, ಲಘು ಪ್ರಬಂಧಗಳಲ್ಲಿ ಡಾ. ಜಿ. ಡಿ. ಜೋಶಿ, ಸ. ಬಿ. ಕು. ಪ್ರಿಯತಮ, ರಾಮನಾಥ ಜೋಶಿ ಮೊದಲಾದವರು, ಜಾನಪದ ಕ್ಷೇತ್ರದಲ್ಲಿ ಬನ್ನಂಜೆ ಬಾಬು ಅಮೀನ್, ನಾಟಕಕಾರರಾಗಿ ಕೆ. ಜೆ. ರಾವ್, ಸದಾನಂದ ಸುವರ್ಣ, ಡಾ. ವ್ಯಾಸರಾವ್ ನಿಂಜೂರ, ಡಾ. ಮಂಜುನಾಥ, ವಿಜಯಕುಮಾರ್ ಶೆಟ್ಟಿ, ಎಚ್. ಕೆ. ಕರ್ಕೇರ ಮೊದಲಾದವರು ತಮ್ಮದೇ ಆದ ಕಾಣಿಕೆಯನ್ನು ನೀಡಿದ್ದಾರೆ. ಕೆಲವರು ಬಹುಮುಖ ಕ್ಷೇತ್ರಗಳಲ್ಲಿ ಕೃಷಿ ಮಾಡಿದ್ದಾರೆ. ಆದ್ದರಿಂದ ಇಲ್ಲಿ ಹೀಗೆ ಹೆಸರಿಸುವುದು, ವಿಭಾಗಿಸುವುದೂ ಅಸಮಾಧಾನಕ್ಕೆ ಎಡೆ ಮಾಡಿಕೊಡುತ್ತದೆಂಬ ಅರಿವೂ ನನಗಿದೆ.

(ಮುಂದಿನ ಸಂಚಿಕೆಗೆ...)

# ವಡಾಲದ ರಾಷ್ಟ್ರೀಯ ಕನ್ನಡ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ

## ದೇಶಪ್ರೇಮ ಹಾಗೂ ದೈವಪ್ರೇಮ ಬೆಳೆದಾಗ ವ್ಯಕ್ತಿ ಸತ್ಪ್ರಜೆಯಾಗಲು ಸಾಧ್ಯ - ಪುತ್ತಿಗೆ ಶ್ರೀಗಳು

ವಡಾಲ: ಭಾರತದ ಸಂಸ್ಕೃತಿ, ಧರ್ಮ ಹಾಗೂ ಮೌಲ್ಯಗಳು ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠವಾದುದು ಅದರ ಮಹತ್ವವನ್ನು ತಿಳಿದುಕೊಂಡು ಅದನ್ನು ತಮ್ಮ ಜೀವನದಲ್ಲಿ ಅಳವಡಿಸಿ ಆಚರಣೆಗೆ ತರುವುದರೊಂದಿಗೆ ದೇಶಪ್ರೇಮ ಹಾಗೂ ದೈವ ಪ್ರೇಮ ಬೆಳೆದಾಗ ವ್ಯಕ್ತಿ ಸತ್ಪ್ರಜೆಯಾಗಲು ಸಾಧ್ಯ ಎಂದು ಜಗದ್ಗುರು ಶ್ರೀಮದ್ ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ ಉಡುಪಿಯ ಪುತ್ತಿಗೆ ಮಠಾಧೀಶರಾದ ಶ್ರೀ ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು ಆಶೀರ್ವಚನ ನೀಡುತ್ತಾ ಕರೆಯಿತ್ತರು.

ದೇಹ ಪ್ರೇಮ ಹೆಚ್ಚಾಗುತ್ತಿವೆ. ಅಂದರೆ ದೇಹವನ್ನು ಪ್ರೀತಿಸುವುದು ಅಂದರೆ ವಿವಿಧ ಪ್ರಕಾರ ಉಡುಪು (ಡ್ರೆಸ್) ಹಾಗೂ ಶೃಂಗಾರ ಸಾಧನಗಳ ಮುಖಾಂತರ (ಮೇಕಪ್) ಇದು ಕಡಿಮೆಯಾಗಿ ದೇಶಪ್ರೇಮ ಹಾಗೂ ದೈವ ಪ್ರೇಮ ಹೆಚ್ಚಾದಾಗ ನಮ್ಮ ಸಂಸ್ಕೃತಿಯು ಉಳಿಸಿಬೆಳೆಸಲು ಸಾಧ್ಯವಾಗುತ್ತದೆ ಎಂದರು ಶ್ರೀಗಳು.

ನಮ್ಮ ಸಂಸ್ಕೃತಿಯಲ್ಲಿರುವ ಮೌಲ್ಯಗಳನ್ನು ಉಳಿಸಿ ಬೆಳೆಸುವುದರೊಂದಿಗೆ ತಂದೆ, ತಾಯಿ ಗುರುಹಿರಿಯರಿಗೆ ಗೌರವವನ್ನು ಕೊಡುವುದರೊಂದಿಗೆ ವಿನಯವನ್ನು ನಮ್ಮ ಜೀವನದಲ್ಲಿ ಬೆಳೆಸಿಕೊಂಡಾಗ




ಎನ್.ಕೆ.ಇ.ಎಸ್.ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸರೋಜಾ ರಾವ್ ಅವರಿಗೆ ಪುತ್ತಿಗೆ ಮಠಾಧೀಶರಾದ ಶ್ರೀ ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು ಆಶೀರ್ವಚನ ನೀಡುತ್ತಿರುವುದು.

ಅವರು ವಡಾಲದ ರಾಷ್ಟ್ರೀಯ ಕನ್ನಡ ಶಾಲೆಯಲ್ಲಿ ಜರುಗಿದ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಧ್ವಜಾರೋಹಣಗೈದು ಸಭಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿ ಸ್ಥಾನದಿಂದ ಆಶೀರ್ವಚನ ನೀಡುತ್ತಿದ್ದರು.

ಅವರು ತಮ್ಮ ಮಾತನ್ನು ಮುಂದುವರಿಸುತ್ತಾ ಜಗತ್ತಿನಲ್ಲಿ ಭಾರತೀಯ ಸಂಸ್ಕೃತಿಯ ಕುರಿತು ಬಹಳ ಗೌರವವಿದೆ ಅಂತಹ ಉದಾತ್ತವಾದ ಸಂಸ್ಕೃತಿಯನ್ನು ಹೊಂದಿರುವ ನಮ್ಮ ದೇಶದ ಬಗ್ಗೆ ಪ್ರೇಮವನ್ನು ಅಂದರೆ ದೇಶಪ್ರೇಮವನ್ನು ಬೆಳೆಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಅದರ ಬಗ್ಗೆ ಕಾಳಜಿಯನ್ನು ಹೊಂದುವುದರೊಂದಿಗೆ ದೇವರ ಮೇಲೆ ಪ್ರೇಮವನ್ನು ಅಂದರೆ ದೈವ ಪ್ರೇಮವನ್ನು ಬೆಳೆಸುವುದರೊಂದಿಗೆ ಅದರ ಬಗ್ಗೆ ನಿಷ್ಠೆಯನ್ನು ಹೊಂದಬೇಕು. ಆದರೆ ಇದು ನಮ್ಮಲ್ಲಿ ಕಡಿಮೆಯಾಗುತ್ತಿದೆ. ಅದರ ಬದಲು

ಅಂಹಕಾರವು ಸಂಪೂರ್ಣವಾಗಿ ತ್ಯಜಿಸಿಹೋಗುತ್ತದೆ. ವಿನಯವು ವಿದ್ಯೆಯ ಮಾಪಕವಾಗಿದೆ ಎಂದ ಶ್ರೀಗಳು ಮಹಾತ್ಮರ ಬಗ್ಗೆ ಗೌರವ ಆದರಗಳನ್ನು ಬೆಳೆಸಿ ಕೊಳ್ಳುವುದರೊಂದಿಗೆ ಮೌಲ್ಯಗಳ ಕುರಿತು ವಿಶೇಷವಾದ ಆಸ್ಥೆಯನ್ನು ಹೊಂದಬೇಕು. ದೇವರ ಮೇಲೆ ಭಯ ಹಾಗೂ ಅಭಯಗಳು ಇರಬೇಕು ಅಂದರೆ ಭಯವನ್ನು ಹುಟ್ಟಿಸುವ ಸಂಸ್ಕೃತಿ ನಮ್ಮದಲ್ಲ ಬದಲಿಗೆ ಭಯವನ್ನು ಹೋಗಲಾಡಿಸುವ ವ್ಯಕ್ತಿತ್ವವನ್ನು ಹೊಂದಿ ಎಲ್ಲರೊಡನೆಯೂ ಹೊಂದಾಣಿಕೆಯಿಂದ ಬಾಳುವೆಯನ್ನು ನಡೆಸುವ ಸಂಸ್ಕೃತಿ ನಮ್ಮದು ಎಂದು ತಿಳಿಸುತ್ತಾ ಮಾತೃಭಾಷೆಯ ಬಗ್ಗೆ ವಿಶೇಷವಾದ ಕಾಳಜಿಯನ್ನು, ಪ್ರೀತಿಯನ್ನು ಹೊಂದಿ ಇತರ ಭಾಷೆಗಳ ಬಗ್ಗೆ ಕೀಳರಿಮೆ ಹೊಂದದೆ ಅವರ ಭಾಷೆಯನ್ನು ಕಲಿತುಕೊಂಡು ನಮ್ಮ ಭಾಷೆಯನ್ನು ಕಲಿಸಿದಾಗ ನಮ್ಮ ಸಂಸ್ಕೃತಿಯಲ್ಲಿರುವ ಉದಾತ್ತ ಮೌಲ್ಯ ಹಾಗೂ ಧ್ಯೇಯಗಳನ್ನು ವಿವರಿಸಲು ಸಾಧ್ಯವಿದೆ ಎಂದು ತಿಳಿಸುತ್ತಾ ಮುಂಬೈ ಮಹಾನಗರದಲ್ಲಿ ಕನ್ನಡ ಮಾಧ್ಯಮವಲ್ಲದೇ ಇಂಗ್ಲೀಷ್ ಮಾಧ್ಯಮದ ವಿದ್ಯಾರ್ಥಿಗಳಿಗೂ ಕನ್ನಡವನ್ನು ಕಲಿಸುತ್ತಿರುವ ಶಾಲೆಯು ಬಲಿಷ್ಠವಾಗಿ ಬೆಳೆಯಲಿ ಎಂದು ಅನುಗ್ರಹಿಸಿದರು.

ಕಾರ್ಯಕ್ರಮವು ಬೆಳಿಗ್ಗೆ 9 ಗಂಟೆಗೆ ಧ್ವಜಾರೋಹಣದೊಂದಿಗೆ ಆರಂಭಗೊಂಡಿತು. ತದನಂತರ NCC ವಿದ್ಯಾರ್ಥಿಗಳ ಆಕರ್ಷಕ ಕವಾಯತು ಹಾಗೂ ಮುಖ್ಯ ಅತಿಥಿಗಳಿಗೆ ಗೌರವ ರಕ್ಷೆಯನ್ನು ನೀಡಲಾಯಿತು. ವಿದ್ಯಾರ್ಥಿಗಳ ಧ್ವಜಗೀತೆ ಹಾಗೂ ಪ್ರತಿಜ್ಞಾ ಸ್ವೀಕಾರದೊಂದಿಗೆ ಕಾರ್ಯಕ್ರಮವು ಪ್ರಾರಂಭಗೊಂಡಿತು. ಸಭಾಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಲಾಯಿತು. ಆಗಮಿಸಿದ ಅಭ್ಯಾಗತರನ್ನು ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸರೋಜ ರಾವ್‌ರವರು ಸ್ವಾಗತಿಸಿದರೆ ಶ್ರೀ ಎನ್. ಆರ್. ರಾವ್‌ರವರು ಶ್ರೀಗಳ ಪರಿಚಯವನ್ನು ಮಾಡಿಕೊಟ್ಟರು. ವಿದ್ಯಾರ್ಥಿಗಳು ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಬಲಿದಾನಗಳ ಕುರಿತು ಹಾಗೂ ನಮ್ಮ ದೇಶದ ಸಾಧನೆಗಳ ಕುರಿತು ತಿಳಿಸಿದರೆ ಶಾಲೆಯ ಎಸ್.ಎಸ್.ಸಿ.ಯಲ್ಲಿ ಪಾಸಾದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೀಡುವ ಪ್ರತಿಭಾ ಪುರಸ್ಕಾರ ಪಡೆದ ಕುಮಾರಿ ನಿಶ್ಮಿತಾ ಸಾಲ್ಯಾನ್ ತನ್ನ ಅನಿಸಿಕೆಗಳನ್ನು ಹಾಗೂ ಸ್ವಾತಂತ್ರ್ಯ ದಿನದ ಮಹತ್ವದ ಕುರಿತು ಸೋದಾಹರಣವಾಗಿ ಅರುಹಿದಳು. ಇದೇ ಸಂದರ್ಭದಲ್ಲಿ ಶಾಲಾ ಕಾರ್ಯಕಾರಿ ಸಮಿತಿಯ ಕೋಶಾಧಿಕಾರಿಗಳಾದ ಶ್ರೀ ವಸಂತರವರು ತಮ್ಮ ಧರ್ಮಪತ್ನಿಯೊಂದಿಗೆ ಶ್ರೀಗಳ ಪಾದ ಪೂಜೆಯನ್ನು ಮಾಡಿದರು. ಶಾಲಾ ಕಾರ್ಯಕಾರಿ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಎಸ್. ಸುಬ್ರಮಣಿಯವರು ಶ್ರೀಗಳಿಗೆ ಫಲಪುಷ್ಪವನ್ನು ಕಾಣಿಕೆಯನ್ನಿತ್ತು ಸತ್ಕರಿಸಿದರು. ಇದೇ ಸಂದರ್ಭದಲ್ಲಿ N.R. ರಾವ್‌ರವರನ್ನು ಶ್ರೀಗಳು ಸತ್ಕರಿಸಿದರು.

ಪ್ರತೀ ವರ್ಷದಂತೆ ಈ ಬಾರಿಯೂ ಎಸ್.ಎಸ್.ಸಿ.ಯಲ್ಲಿ ಪಾಸಾದ ಪ್ರತಿಭಾವಂತ ವಿದ್ಯಾರ್ಥಿಗಳಿಗಾಗಿ ಪ್ರತಿಭಾ ಪುರಸ್ಕಾರ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು ಇದರಲ್ಲಿ ಪ್ರತೀ ವಿಷಯದಲ್ಲಿ ಪ್ರಥಮ ಬಂದ ವಿದ್ಯಾರ್ಥಿಗಳನ್ನು ದಾನಿಗಳ ದತ್ತಿ ನಿಧಿಯಿಂದ ಹಾಗೂ ವಿಜಯಾಬ್ಯಾಂಕ್ ವಡಾಲ ಶಾಲೆಯಿಂದ ತಲಾ 500 ರೂ. ಹೈಕೋರ್ಟಿನ ಹಿರಿಯ ವಕೀಲರೂ ಹಾಗೂ ತೆರಿಗೆ ಮಾಹಿತಿದಾರರಾದ ಶ್ರೀ ವಿಜಯ ಪಾಟೀಲರು ಎಸ್.ಎಸ್.ಸಿ.ಯಲ್ಲಿ ಪಾಸಾದ ಎಲ್ಲಾ 34 ಕನ್ನಡ ಮಾಧ್ಯಮ

ವಿದ್ಯಾರ್ಥಿನಿಯರಿಗೆ ತಲಾ 1000 ನಗದು ಬಹುಮಾನ, ಗುರುರಾಜ್‌ರವರು 2 ಮಾಧ್ಯಮದಲ್ಲೂ ಶಾಲೆಗೆ ಪ್ರಥಮ ಬಂದ ವಿದ್ಯಾರ್ಥಿಗಳಿಗೆ 1000 ರೂ. ಬೆಲೆ ಬಾಳುವ Titan Watch (ಟೈಟನ್ ವಾಚನ್ನು) ಬಹುಮಾನವಾಗಿ ನೀಡಿದರೆ ಲಲಿತಾ ರಾವ್‌ರವರು ಶಾಲೆಗೆ ಪ್ರಥಮ ಬಂದ ವಿದ್ಯಾರ್ಥಿಗೆ ಚಿನ್ನದ ಪದಕವನ್ನು ನೀಡಿದರೆ ಶಾಲೆಯ ಹಿತೈಷಿಗಳಾದ ಶ್ರೀಮತಿ ಯಶೋಧ ಶೆಟ್ಟಿಗಾರ್‌ರವು ಶಾಲೆಗೆ ಪ್ರಥಮ ಬಂದ ವಿದ್ಯಾರ್ಥಿಗೆ ತಲಾ 2500 ರೂ. ಅದರಂತೆ ಶಾಲಾ ಕಾರ್ಯಕಾರಿ ಸಮಿತಿಯ ಸಭಾಧ್ಯಕ್ಷ (Chairman) ಬಿ.ಆರ್ ಮಂಜುನಾಥರವರು ಶೇ. 60ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿ ಪಾಸಾದ ವಿದ್ಯಾರ್ಥಿಗಳಿಗೆ ತಲಾ 1000 ನಗದು ಪುರಸ್ಕಾರವನ್ನಿತ್ತರೆ ತಮ್ಮ ತಮ್ಮ ವಿಷಯದಲ್ಲಿ ಶೇಕಡಾ ಫಲಿತಾಂಶ 100 ತಂದ ಶಿಕ್ಷಕರನ್ನು ಶಾಲಾ ಕಾರ್ಯಕಾರಿ ಸಮಿತಿಯ ಪತಿಯಿಂದ ತಲಾ 1000 ರೂ.ಗಳನ್ನಿತ್ತು ಸತ್ಕರಿಸಲಾಯಿತು. ಇದೇ ಸಂದರ್ಭದಲ್ಲಿ ಶ್ರೀಗಳು ಶಾಲಾ ವಿದ್ಯಾರ್ಥಿಗಳಿಗಾಗಿ ಸಂಸ್ಕಾರ ಹಾಗೂ ಸಂಸ್ಕೃತಿ ಪಾಠ ಎಂಬ ಪುಸ್ತಕವನ್ನು ಬಿಡುಗಡೆಗೊಳಿಸಿದರು. ಸಭಾ ಕಾರ್ಯಕ್ರಮವನ್ನು ಶಿಕ್ಷಕ ಪ್ರಕಾಶ್ಚಂದ್ರ ಎಂ. ಆರ್. ನಿರ್ವಹಿಸಿದರೆ ಕೊನೆಯಲ್ಲಿ ಸುವರ್ಣ ಲತಾರವರು ಧನ್ಯವಾದಗೈದರು. ವಂದೆ ಮಾತರಮ್‌ದೊಂದಿಗೆ ಕಾರ್ಯಕ್ರಮವು ಮುಕ್ತಾಯಗೊಂಡಿತು. ಶ್ರೀಗಳು ಎಲ್ಲರನ್ನು ಮಂತ್ರಾಕ್ಷತೆಯನ್ನಿತ್ತು ಹರಸಿದರು.

ವರದಿ : ಪ್ರಕಾಶ್ಚಂದ್ರ ಎಂ. ಆರ್.

## "ಸರ್ವಸಮಭಾವ"ವೇ ಎಲ್ಲ ಧರ್ಮಗಳ ತಿರುಳು" - ಡಾ. ತಾಳ್ತಜೆ

ಗುಲ್ಬರ್ಗ : ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿಯ ಇತಿಹಾಸದ ಬಗೆಗೆ ತಲಸ್ಪರ್ಶಿಯಾದ ಸಂಶೋಧನೆಗಳನ್ನು ನಡೆಸಿದ ಮುಂಬಯಿ ವಿಶ್ವವಿದ್ಯಾಲಯ, ಕನ್ನಡ ವಿಭಾಗದ ಮುಖ್ಯಸ್ಥರಾಗಿರುವ ಡಾ. ತಾಳ್ತಜೆ ವಸಂತ ಕುಮಾರರನ್ನು ಗುಲ್ಬರ್ಗಾದಲ್ಲಿ ಇತ್ತೀಚೆಗೆ ಸನ್ಮಾನಿಸಲಾಯಿತು.

ಅಂತಾರಾಷ್ಟ್ರೀಯ ಬೌದ್ಧ ಯುವ ಸಂಘಟನೆ, ನಾಗಪುರ ಇದರ ಜಿಲ್ಲಾ ಶಾಖೆಯ ಪತಿಯಿಂದ ಆಯೋಜಿತವಾಗಿದ್ದ ವಿಚಾರ ಸಂಕಿರಣದ ಅಂಗವಾಗಿ ಈ ಸನ್ಮಾನವು ನಡೆಯಿತು. ಸ್ಥಳೀಯ ಸಿದ್ಧಾರ್ಥ ಕಾನೂನು ಮಹಾವಿದ್ಯಾಲಯದಲ್ಲಿ ನಡೆದ ಈ ಸಮಾರಂಭದಲ್ಲಿ ಡಾ. ತಾಳ್ತಜೆಯವರನ್ನು ಅಭಿನಂದಿಸಿದ, ಜಿಲ್ಲಾ ಪಂಚಾಯತ್‌ನ ಮುಖ್ಯ ಎಂಜಿನಿಯರ್ ಆದ ಶ್ರೀ ಆರ್. ರುದ್ರಯ್ಯನವರು ಕಾಲಗರ್ಭದಲ್ಲಿ ಅಡಗಿದ್ದ ಬೌದ್ಧ ಸಂಸ್ಕೃತಿಯ ಹಲವು ಆಯಾಮಗಳನ್ನು ಅವರು ಅನಾವರಣಗೊಳಿಸುತ್ತಿರುವುದು ಅತ್ಯಂತ ಸ್ತುತ್ಯರ್ಹ ಕಾರ್ಯವಾಗಿದೆ ಎಂದರು.

ಸನ್ಮಾನವನ್ನು ಸ್ವೀಕರಿಸಿದ ಡಾ. ತಾಳ್ತಜೆಯವರು ಅಶೋಕನ ಕಾಲಕ್ಕಾಗಲೆ ಕರ್ನಾಟಕದಲ್ಲಿ ಬೌದ್ಧಧರ್ಮವು ಪ್ರಚಲಿತವಾಗಿತ್ತು. ಅದರ ಸಾಂಸ್ಕೃತಿಕ ಕುರುಹುಗಳು ಅಲ್ಲಿಯ ದೇವಾಲಯಗಳು, ವಾಸ್ತುಶೈಲಿ, ಸ್ಥಳನಾಮ ಹಾಗೂ ವ್ಯಕ್ತಿ ನಾಮಗಳಲ್ಲಿ ಎದ್ದು ಕಾಣುತ್ತವೆ. ಆಂತರಿಕ ಅಸಂತುಷ್ಟ ರಾಜಮನೆತನಗಳ ಅನಾಸಕ್ತಿ ಹಾಗೂ ತಾಂತ್ರಿಕ ಆಚರಣೆಗಳ ಒಲವುಗಳಿಂದಾಗಿ ಅನಂತರ ಅದು ಅವನತಿಯತ್ತ ಸಾಗತೊಡಗಿತು. ಈ ಎಲ್ಲ ನೆಲೆಗಳ ವಸ್ತುನಿಷ್ಠ ಅಧ್ಯಯನಗಳ ಮೂಲಕ ಸತ್ಯದ ಅನ್ವೇಷಣೆಗಳು ಸಾಧ್ಯವಾಗಬೇಕೆಂದು ಅಭಿಪ್ರಾಯಪಟ್ಟರು. ಅಲ್ಲದೆ, ಪೂರ್ವಾಗ್ರಹ ಮುಕ್ತವಾದ ಜಿಜ್ಞಾಸೆಗಳಿಗೆ ಅನುವು ದೊರೆಯುವುದರಿಂದಲೇ ಎಲ್ಲ ಸನ್ಮಾನಗಳು ಅರ್ಥವತ್ತಾಗುತ್ತವೆಂಬ ಅನಿಸಿಕೆಯನ್ನು ವ್ಯಕ್ತಪಡಿಸಿದರು.

## ರಾಮಮೋಹನ ಬಳ್ಕುಂಜೆಗೆ ಜಯಂತಿ ಕುರ್ಕಾಲ್ ಪ್ರಶಸ್ತಿ



ಮುಂಬಯಿಯ ಹಿರಿಯ ಕವಿ, ಪತ್ರಕರ್ತ ರಾಮಮೋಹನ್ ಶೆಟ್ಟಿ ಬಳ್ಕುಂಜೆ ಅವರು 2005ನೆ ಸಾಲಿನ ಜಯಂತಿ ಕುರ್ಕಾಲ್ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಲಕ್ಷ್ಮೀಛಾಯಾ ವಿಚಾರ ವೇದಿಕೆಯು ಕೊಡುತ್ತಾ ಬಂದಿರುವ ಈ ಪ್ರಶಸ್ತಿ ವಿಜೇತರಲ್ಲಿ ಬಳ್ಕುಂಜೆಯವರು 13ನೆಯವರಾಗಿದ್ದಾರೆ.

ವಿದ್ಯಾರ್ಥಿಯಾಗಿದ್ದಾಗಲೆ ಸಾಹಿತ್ಯಾಭಿರುಚಿಯನ್ನು ಮೈಗೂಡಿಸಿಕೊಂಡು ಬಂದಿರುವ ಬಳ್ಕುಂಜೆಯವರು ತನ್ನ ಕವನ, ಕತೆ, ಲೇಖನಗಳಿಂದ ಮುಂಬಯಿ ಕನ್ನಡಿಗರಿಗೆ ಸುಪರಿಚಿತರಾಗಿದ್ದಾರೆ. ಅವರ ಮೊತ್ತ ಮೊದಲಿನ ಕತೆ ಸುಮಾರು 50 ವರ್ಷಗಳ ಹಿಂದೆ (1957) ಮಂಗಳೂರಿನ 'ಸಂಗಾತಿ' ವಾರ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಆದರೆ ಮೂಲತಃ ಅವರು ಕವಿ ಮನಸ್ಸಿನವರು. ತನ್ನ ಸೃಜನ ಶೀಲತೆಗೆ ನವೋದಯದ ಶೈಲಿಯನ್ನೇ ಹೆಚ್ಚಾಗಿ ಬಳಸುತ್ತಿರುವ ಕವಿ ಬಳ್ಕುಂಜೆಯವರು ಈಗಾಗಲೇ ಹೂಮಾಲೆ, ನೈವೇದ್ಯ, ಭಾವಸ್ಪಂದನ ಮತ್ತು ಭಾವತರಂಗ ಎಂಬ ನಾಲ್ಕು ಕವನ ಸಂಕಲನಗಳನ್ನು ಸಾರಸ್ವತ ಲೋಕಕ್ಕೆ ಅರ್ಪಿಸಿದ್ದಾರೆ. ಅವರ ಕವನಗಳು ಗೇಯತೆಯಿಂದ ಕೂಡಿದ್ದು, ನೈವೇದ್ಯವೆಂಬ ಧ್ವನಿ ಸುರುಳಿಯನ್ನೂ ಅವರು ನಿರ್ಮಿಸಿದ್ದಾರೆ.

ಮಂಗಳೂರಿನ 'ಸಪ್ತಸಾರ' ಪತ್ರಿಕೆಯ ಮುಂಬಯಿ ಪ್ರತಿನಿಧಿಯಾಗಿ, ಮನಸ್ಪಂದನ ಪತ್ರಿಕೆಯ ಸಂಪಾದಕರಾಗಿ ದುಡಿದ ಬಳ್ಕುಂಜೆ ಕಳೆದ ಹದಿನೈದು ವರ್ಷಗಳಿಂದ ಪತ್ರಪುಷ್ಪ ಮಾಸಿಕದ ಸಂಪಾದಕ ಮಂಡಳಿಯಲ್ಲಿದ್ದುಕೊಂಡು ಹಲವಾರು ಪ್ರತಿಭೆಗಳನ್ನು ಪರಿಚಯಿಸಿದ್ದಾರೆ. ಕಳೆದ ಒಂದು ವರ್ಷದಿಂದ ಪತ್ರಪುಷ್ಪದ ಪ್ರಧಾನ ಸಂಪಾದಕರಾಗಿ ದುಡಿಯುತ್ತಿರುವ ಬಳ್ಕುಂಜೆ ಎಲ್ಲರಿಗೂ ಬೇಕಾದ ವ್ಯಕ್ತಿ.

ಈ ಸಲದ ಪ್ರಶಸ್ತಿಗೆ ಬಳ್ಕುಂಜೆಯವರು ಸರ್ವಾನುಮತದಿಂದ ಆಯ್ಕೆಯಾಗಿರುವರೆಂದ ಆಯ್ಕೆ ಸಮಿತಿಯ ನೇತಾರ ಪೇಟೆಮನೆ ಪ್ರಕಾಶ್ ಶೆಟ್ಟಿಯವರು ಪ್ರಕಟಣೆ ಮೂಲಕ ತಿಳಿಸಿದ್ದಾರೆ.

## ಡೊಂಬಿವಲಿಯಲ್ಲಿ ಶ್ರೀ ಮಹಾಗಣಪತಿ ಉತ್ಸವ ಶ್ರೀ ಗಣಪತಿ ಉತ್ಸವವು ಭಾವೈಕ್ಯತೆಗೆ ಸಹಕಾರಿಯಾಗಿದೆ - ಶ್ರೀ ಎಂ. ವಿ. ಜಯರಾಂ

''ಎಲ್ಲಾ ವರ್ಗದ, ಜಾತಿಯ, ಭಾಷೆಯ ಮತ್ತು ಮತೀಯ ಜನರನ್ನು ಒಂದುಗೂಡಿಸುವ ಶಕ್ತಿ ಶ್ರೀಗಣಪತಿ ಉತ್ಸವಕ್ಕೆ ಇದೆ. ಈ ಸಮಯದಲ್ಲಿ ಜನರು ತಮ್ಮ ಪ್ರಾಂತೀಯ ಜಾತಿಯ, ಧರ್ಮದ ಕಟ್ಟುಪಾಡುಗಳನ್ನು ಬದಿಗಿಟ್ಟು ಉತ್ಸಾಹದಿಂದ ಉತ್ಸವದಲ್ಲಿ ಭಾಗವಹಿಸುತ್ತಾರೆ. ಆದ್ದರಿಂದ ಇದು ಭಾವೈಕ್ಯತೆಗೆ ಸಹಕಾರಿಯಾಗಿದೆ'' ಎಂದು ಮಹಾರಾಷ್ಟ್ರ ಗೃಹ ಮಂಡಳಿಯ ಹಿರಿಯ ಅಧಿಕಾರಿಯಾದ ಶ್ರೀ ಎಂ. ವಿ. ಜಯರಾಂ ತಿಳಿಸಿದರು. ಅವರು ಡೊಂಬಿವಲಿಯ ಮೈಸೂರು ಸಂಗೀತ ವಿದ್ಯಾಲಯದವರು ಏರ್ಪಡಿಸಿದ್ದ ಶ್ರೀ ಮಹಾಗಣಪತಿ ಉತ್ಸವದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಶ್ರೀಯುತರು ಮುಂದುವರೆದು ಸಂಗೀತಕ್ಕೆ ಭಾಷೆ ಅಡ್ಡ ಬರುವುದಿಲ್ಲ. ಎಲ್ಲರನ್ನೂ ಮನತಣಿಸಿ ಆಧ್ಯಾತ್ಮದತ್ತ ಕೊಂಡುಯುತ್ತದೆ. ಶಾಸ್ತ್ರೀಯ ಸಂಗೀತ ಇಂತಹ ಶಾಸ್ತ್ರೀಯ ಸಂಗೀತದ ಶಿಕ್ಷಣವನ್ನು ಮಕ್ಕಳಿಗೆ ಕೊಡುತ್ತಾ ಉತ್ತಮ ಸಂಸ್ಕೃತಿಯನ್ನು ಮಕ್ಕಳಿಗೆ ನೀಡುವ ವಿದ್ಯಾಲಯದ ಚಟುವಟಿಕೆಗಳನ್ನು ಪ್ರಶಂಸಿಪರು. ಅಂದು ವಿದ್ಯಾರ್ಥಿವೃಂದ ನಡೆಸಿಕೊಟ್ಟ ಶ್ರೀ ಗಣಪತಿ ಸಂಗೀತ ಭಾವೈಕ್ಯ ಮಾಲಿಕಾ ಕಾರ್ಯಕ್ರಮದ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಈ ಕಾರ್ಯಕ್ರಮವನ್ನು ರಾಷ್ಟ್ರಮಟ್ಟಕ್ಕೆ ಕೊಂಡೊಯ್ಯಬೇಕೆಂದು ಸಲಹೆ ಮಾಡಿ ವಿದ್ಯಾಲಯಕ್ಕೆ ಯಶಸ್ಸನ್ನು ಹಾರೈಸಿದರು.

ಎರಡು ದಿನಗಳು ನಡೆದ ಉತ್ಸವದಲ್ಲಿ ಮೊದಲನೆಯ ದಿನ ವಿದ್ಯಾಲಯದ ಕಿರಿಯ, ಹಿರಿಯ, ಪ್ರೌಢ ವಿದ್ಯಾರ್ಥಿಗಳಿಂದ ಸಂಗೀತ ನಡೆಯಿತು. ಕುಮಾರಿ

ಅರುಣ ಮತ್ತು ಕುಮಾರಿ ಸುಶೀಲಾ ರಾವ್ ಚಿಕ್ಕ ಸಂಗೀತ ಕಚೇರಿ ನಡೆಸಿಕೊಟ್ಟರು. ಎರಡನೇ ದಿನ ವಿದ್ಯಾಲಯದ ವಿದ್ಯಾರ್ಥಿ ವೃಂದದಿಂದ ವಾದ್ಯಸಂಗೀತ, ತಾಳವಾದ್ಯ ಸಂಯೋಜನೆ ನಡೆಯಿತು. ನಂತರ ವಿವಿಧ ಭಾಷೆಗಳಿಂದ ಶ್ರೀ ಗಣಪತಿ ಕೃತಿಗಳನ್ನು ಆಯ್ದು ವಿದುಷಿ ಉಮಾನಾಗಭೂಷಣ್ ರಾಗ ಸಂಯೋಜಿಸಿ ನಿರ್ದೇಶಿಸಿದ ''ಶ್ರೀ ಗಣಪತಿ ಸಂಗೀತ ಭಾವೈಕ್ಯ ಮಾಲಿಕಾ'' ಕಾರ್ಯಕ್ರಮವನ್ನು ವಿದ್ಯಾರ್ಥಿ ವೃಂದ ಸಾದರಪಡಿಸಿ ರಸಿಕರ ಮೆಚ್ಚುಗೆ ಪಡೆದರು.

ಪಕ್ಕವಾದ್ಯದಲ್ಲಿ ಕುಮಾರಿ ಅರುಣ, ಪಿಟೀಲಿನಲ್ಲಿ, ಶ್ರೀ ನಳಂದ ಮೃದಂಗದಲ್ಲಿ ಶ್ರೀ ಸುಮಿತ್ ತಬಲಾದಲ್ಲಿ ಸಹಕರಿಸಿದರು.

ಶ್ರೀ ಶ್ರೀನಿವಾಸನ್, ಶ್ರೀಮತಿ ಚಿತ್ರ ಮಹಾಲಿಂಗಂ ಮತ್ತು ಶ್ರೀ ಬಾಬು ರಾವ್‌ಎಂ. ಪ್ರಭು ಅವರು ಸೇವಾಕರ್ತರಾಗಿ ಸಹಕರಿಸಿದರು. ಆರಂಭದಲ್ಲಿ ಪ್ರಾಂಶುಪಾಲೆ ಉಮಾನಾಗಭೂಷಣ್ ಸ್ವಾಗತಿಸಿದರು. ಶ್ರೀ ನಾಗಭೂಷಣ್ ವಂದಿಸಿದರು.

ಮಹಾಮಂಗಳಾರತಿ, ವಿಸರ್ಜನೆ, ಮಹಾಪ್ರಸಾದ ವಿನಿಯೋಗ ದೊಂದಿಗೆ ಸಮಾರಂಭವು ಮುಕ್ತಾಯವಾಯಿತು.

## ಕರ್ನಾಟಕ ಸುವರ್ಣ ಜಯಂತಿಯ ಕನ್ನಡ ಮತ್ತು ಸಂಸ್ಕೃತಿ ಸಮಾವೇಶ

ಕರ್ನಾಟಕ ರಾಜ್ಯಕ್ಕೆ ನವೆಂಬರ್ 1, 2006ರಂದು 50 ವರ್ಷಗಳು ತುಂಬುತ್ತದೆ. ಇದರ ಸವಿನೆನಪಿಗಾಗಿ,



ಹೊರನಾಡ ಕನ್ನಡಿಗ ಕನ್ನಡ ಸಂಸ್ಕೃತಿ ಸಮಾವೇಶವನ್ನು ಉದ್ಘಾಟಿಸುತ್ತಿರುವ ಸರ್ಕಾರದ ಕಾರ್ಯದರ್ಶಿ ಐ.ಎಂ. ವಿಠಲ ಮೂರ್ತಿರವರು ದೀಪಬೆಳಗಿಸುತ್ತಿದ್ದಾರೆ

ಕರ್ನಾಟಕ ಸರ್ಕಾರ ನವೆಂಬರ್ 1, 2006 ರಿಂದ ಅಕ್ಟೋಬರ್ 31, 2007ರ ವರೆಗೆ ಒಂದು ವರ್ಷಕಾಲ ಸುವರ್ಣ ಜಯಂತಿ ಉತ್ಸವವನ್ನು ವೈಭವದಿಂದ ಆಚರಿಸಲು ನಿರ್ಧರಿಸಿದೆ.

ಸುವರ್ಣ ಜಯಂತಿ ಉತ್ಸವವು ಕೇವಲ ಕರ್ನಾಟಕಕ್ಕೆ ಸೀಮಿತವಾಗಿರದೆ ಹೊರ ರಾಜ್ಯಗಳಲ್ಲಿ ಆಚರಿಸಬೇಕೆಂಬ ಉದ್ದೇಶದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಹೊರನಾಡ ಕನ್ನಡ ಸಂಘ ಸಂಸ್ಥೆಗಳ ಪ್ರತಿನಿಧಿಗಳನ್ನು ಆಗಸ್ಟ್ 2 ಮತ್ತು 3 ರಂದು ಸಮಾವೇಶಕ್ಕೆ ಆಹ್ವಾನಿಸಿದ್ದರು. ಹೊರನಾಡಿನಿಂದ 54 ಸಂಘ ಸಂಸ್ಥೆಗಳ ಪ್ರತಿನಿಧಿಗಳು ಸಮಾವೇಶದಲ್ಲಿ ಭಾಗವಹಿಸಿದ್ದರು. ಸಮಾವೇಶವು ಬೆಂಗಳೂರಿನ ಕನ್ನಡ ಭವನದ ನಯನ ಸಭಾಂಗಣದಲ್ಲಿ ನಡೆಯಿತು. ಆರಂಭದಲ್ಲಿ ಶ್ರೀಮತಿ ಅರ್ಚನಾ ಉಡುಪ ತಂಡದವರಿಂದ ಸುಗಮ ಸಂಗೀತ ಕಾರ್ಯಕ್ರಮ ನಡೆಯಿತು.

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಆಯುಕ್ತರಾದ ಶ್ರೀ ನಿರಂಜನ್‌ರವರು ಎಲ್ಲರನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಮಾವೇಶದ ಉದ್ಘಾಟನೆಯನ್ನು ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಹಾಗೂ ಪ್ರವಾಸೋದ್ಯಮ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಪಿ.ಎಂ. ವಿಟ್ಠಲ ಮೂರ್ತಿ, ಐ.ಎ.ಎಸ್. ಜ್ಯೋತಿ ಬೆಳಗಿಸುವುದರ ಮೂಲಕ ನೆರವೇರಿಸಿದರು.

ಶ್ರೀ ವಿಠ್ಠಲ ಮೂರ್ತಿಯವರು ಉದ್ಘಾಟನಾ ಭಾಷಣ ಮಾಡುತ್ತಾ ಕರ್ನಾಟಕ ಸುವರ್ಣ ಜಯಂತಿ ಉತ್ಸವವನ್ನು ಆಚರಿಸಲು ಕರ್ನಾಟಕ ಸರ್ಕಾರ ಆಯೋಜಿಸಿರುವ ಯೋಜನೆಯನ್ನು ವಿವರಿಸಿದರು. ಕರ್ನಾಟಕದ 5 ಕಡೆಗಳಲ್ಲಿ ಕರ್ನಾಟಕ ಸಮುಚ್ಚಯವನ್ನು ನಿರ್ಮಿಸಿ ಪುಟ್ಟ ಕರ್ನಾಟಕ ದರ್ಶನದ ಪ್ರದರ್ಶನವನ್ನು ಏರ್ಪಡಿಸುವುದು. ವಿಶ್ವಕನ್ನಡ ಸಮ್ಮೇಳನವನ್ನು ಏರ್ಪಡಿಸಿ ಇದರ ಅಂಗವಾಗಿ ಸಾಹಿತ್ಯ, ಸಂಗೀತ, ಔದ್ಯೋಗಿಕದ ಕರ್ನಾಟಕ ಅಭಿವೃದ್ಧಿಯನ್ನು ತಿಳಿಯಪಡಿಸುವ ವಸ್ತು ಪ್ರದರ್ಶನ, 110 ಕನ್ನಡಗ್ರಂಥಗಳ ಪ್ರಕಟಣೆ, ಅಕ್ಟೋಬರ್ 4ರಿಂದ ದೇಶದ ಎಂಟು ಮೂಲೆಗಳಿಂದ ಸಾಹಿತಿ, ಕಲಾವಿದರು, ಜಾನಪದ ತಂಡಗಳ ಹಾಗೂ ಪ್ರಮುಖ ವ್ಯಕ್ತಿಗಳನ್ನೊಳಗೊಂಡ ಸಾಂಸ್ಕೃತಿಕ ದಿಬ್ಬಣಗಳು ರಾಜ್ಯದಲ್ಲೆಲ್ಲಾ ಸಂಚರಿಸಿ ಅಕ್ಟೋಬರ್ 31ರಂದು ರಾಜಧಾನಿಯನ್ನು ತಲುಪಿ ರಾಜ್ಯೋತ್ಸವದಂದು ಪ್ರಾರಂಭಿಸುವ ಕರ್ನಾಟಕ ಸುವರ್ಣ ಜಯಂತಿ ಉತ್ಸವದಲ್ಲಿ ಭಾಗವಹಿಸುವಿಕೆ, ಕರ್ನಾಟಕದ ಏಕೀಕರಣಕ್ಕಾಗಿ ದುಡಿದ ಮಹನೀಯರುಗಳ ಸಾಕ್ಷ್ಯಚಿತ್ರಗಳ ನಿರ್ಮಾಣ, 50 ವರ್ಷಗಳಲ್ಲಿ ಕರ್ನಾಟಕದ ಅಭಿವೃದ್ಧಿ ಸಾರುವ ಪ್ರದರ್ಶನ, ಹಿಂದಿನ ಚಿಂತನ - ಆತ್ಮಾವಲೋಕನ - ಕೇವಲ ಹಬ್ಬದಿಂದ ತೃಪ್ತಿಗೊಂಡು ಅಂತ್ಯಗೊಳ್ಳದೆ ಮುಂದಿನ ಅಭಿವೃದ್ಧಿಗೂ ಚಿಂತನೆ, ಹೀಗೆ ಹಮ್ಮಿಕೊಂಡಿರುವ ಅನೇಕ ಯೋಜನೆಗಳನ್ನು ಸವಿಸ್ತಾರವಾಗಿ ವಿವರಿಸಿ, ಈ ಉತ್ಸವವನ್ನು ಹೊರನಾಡ ಕನ್ನಡಿಗರೂ ಆಚರಿಸಬೇಕು. ಇದರ ಬಗ್ಗೆ ಸಲಹೆ ಸೂಚನೆಗಳನ್ನು ಮಂಡಿಸಬೇಕೆಂದು ಹೊರನಾಡ ಕನ್ನಡಿಗರಿಗೆ ಆಹ್ವಾನವನ್ನಿತ್ತರು.

ಸಮಾವೇಶದ ಅಧ್ಯಕ್ಷತೆ ವಹಿಸಿದ್ದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯನವರು ಕನ್ನಡದ ಹಿರಿಮೆಯನ್ನು ಹೆಚ್ಚಿಸಲು ಹೊರನಾಡ ಕನ್ನಡಿಗರು ಸಲ್ಲಿಸಿದ ಸೇವೆ ಗಮನೀಯವಾದುದು ಎಂದು ತಿಳಿಸಿ ಹೊರನಾಡ ಕನ್ನಡಿಗರಾದ ಅನುಪಮನಿರಂಜನ ಡಾ. ಗೋವಿಂದ ಪೈ, ಡಾ. ರಂ. ಶ್ರೀ ಮುಗುಳಿ ಕೈಯ್ಯಾರ ರೈ ಮರಿಯಪ್ಪ ಭಟ್ಟರು, ವ್ಯಾಸರಾಯ ಬಲ್ಲಾಳ, ಯಶವಂತ ಚಿತ್ತಾಲ ಮುಂತಾದವರ ಕೊಡುಗೆಯನ್ನು ಪ್ರಶಂಸಿಸಿದರು. ಕನ್ನಡದ ಹಿರಿಮೆಯನ್ನು ಉಳಿಸಿಕೊಂಡು ಮತ್ತೂ ವೈಭವೀಕರಿಸಲು ಹೊರನಾಡ ಕನ್ನಡಿಗರ ಪಾತ್ರ ಮಹತ್ತರವಾದುದು, ಹೊರನಾಡ - ಒಳನಾಡ ಕನ್ನಡಿಗರ ಸಂಬಂಧ ಎಂದೆಂದಿಗೂ ಜೀವಂತಾಗಿರಲಿ ಎಂದು ತಿಳಿಸಿ ಸಮಾವೇಶಕ್ಕೆ ಯಶಸ್ಸನ್ನು ಹಾರೈಸಿದರು.

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಜಂಟಿ ನಿರ್ದೇಶಕ ಶ್ರೀ ಚಿಕ್ಕಣ್ಣನವರು ವಂದನಾರ್ಪಣೆ ಮಾಡಿದರು.

ಮಧ್ಯಾಹ್ನ ನಡೆದ ಹೊರನಾಡ ಪ್ರತಿನಿಧಿಗಳ ಸಂವಾದದಲ್ಲಿ ಸಭೆಯ ಒಮ್ಮತದಂತೆ ಹೊರರಾಜ್ಯಗಳಿಂದ ಆಗಮಿಸಿದ್ದ ಆಯಾ ರಾಜ್ಯಗಳ ಪ್ರತಿನಿಧಿಗಳು ತಮ್ಮ ತಮ್ಮಲ್ಲೇ ಸಮಾಲೋಚಿಸಿ ಪ್ರತಿ ಹೊರ ರಾಜ್ಯದದಲ್ಲಿ ತಾವು ಆಚರಿಸಬಹುದಾದ ಸುವರ್ಣ ಜಯಂತಿ ಉತ್ಸವದ ಬಗ್ಗೆ ಆಯಾ ರಾಜ್ಯದ ಪ್ರತಿನಿಧಿಗಳು ವಿವರಣೆ ನೀಡಿದರು.

ಈ ಸಮಾವೇಶಕ್ಕೆ ದೆಹಲಿ ಕಲ್ಕತ್ತ, ತಮಿಳುನಾಡು, ಗೋವಾ, ಮಹಾರಾಷ್ಟ್ರ, ಕೇರಳ (ಕಾಸರಗೋಡು), ಆಂಧ್ರ, ಹರಿಯಾನ ಮಧ್ಯಪ್ರದೇಶ ವಾರಣಾಸಿ (ಉತ್ತರಪ್ರದೇಶ), ಪಾಂಡಿಚೇರಿ, ಗುಜರಾತ್, ರಾಜ್ಯಗಳಿಂದ 54 ಸಂಸ್ಥೆಗಳ 85 ಪ್ರತಿನಿಧಿಗಳು ಭಾಗವಹಿಸಿದ್ದರು.

ಮುಂಬಯಿಯಿಂದ ಕರ್ನಾಟಕ ಸಂಘ, ಮೈಸೂರು ಅಸೋಸಿಯೇಷನ್, ಕಲ್ಯಾಣ್ ಕರ್ನಾಟಕ ಸಂಘ, ಸಾಂಸ್ಕೃತಿಕ ಕಲಾ ಕೇಂದ್ರ ಕಲ್ಯಾಣ್, ಮುಂಬೆಳಕು ಕನ್ನಡ ಬಳಗ ಪದವೀಧರ ಯಕ್ಷಗಾನ ಮಂಡಳಿ, ಮುಂಬಯಿ ಕನ್ನಡ ಸಂಘ, ರಾಷ್ಟ್ರೀಯ ಕನ್ನಡ ಶಿಕ್ಷಣ ಶಾಲೆ ವಡಾಲ, ಕಲಾಕೇಂದ್ರ, ಮೈಸೂರು ಸಂಗೀತ ವಿದ್ಯಾಲಯ ಡೊಂಬಿವಲಿ, ಅಲ್ಲದೇ ಔರಂಗಾಬಾದ್, ಪುಣೆ, ಕನ್ನಡ ಸಂಘಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಇದೇ ಸಮಯದಲ್ಲಿ ಅಖಿಲಭಾರತ ಕನ್ನಡ ಸಂಘಸಂಸ್ಥೆಗಳ ಒಕ್ಕೂಟದ ಸಮಾಲೋಚನೆ ನಡೆಯಿತು. ಕಾಲಾವಕಾಶ ಇಲ್ಲದ್ದರಿಂದಲೂ, ಒಕ್ಕೂಟದ ಸದಸ್ಯತ್ವ ಕೇವಲ ಆರು ಇದ್ದುದರಿಂದಲೂ, ಮುಂದೆ ಯಾವಾಗಲಾದರೂ ಒಕ್ಕೂಟದ

ಸಮಾವೇಶವನ್ನು ಕರೆದು ವಿಷಯಗಳನ್ನು ಚರ್ಚಿಸಬಹುದೆಂಬ ಅಭಿಪ್ರಾಯವನ್ನು ಸಭೆಯು ವ್ಯಕ್ತಪಡಿಸಿ ಸಭೆಯನ್ನು ಮುಂದೂಡಲಾಯಿತು.

- ಬಿ. ನಾಗಭೂಷಣ

### ಶ್ರೀಮತಿ ಮೇಧಾ ಕುಲಕರ್ಣಿ ಅವರಿಗೆ ಎಂ.ಫಿಲ್ ಪದವಿ

ಶ್ರೀಮತಿ ಮೇಧಾ ಕುಲಕರ್ಣಿ ಅವರು ಬರೆದು ಸಲ್ಲಿಸಿದ ಕನಕದಾಸ ಮತ್ತು ಏಕನಾಥ ಒಂದು ತೌಲನಿಕ ಅಧ್ಯಯನ ಎಂಬ ಸಂಪ್ರಬಂಧವನ್ನು ಮನ್ನಿಸಿ ಮುಂಬಯಿ ವಿಶ್ವವಿದ್ಯಾಲಯವು ಕನ್ನಡದಲ್ಲಿ ಎಂ.ಫಿಲ್ ಪದವಿಯನ್ನು ನೀಡಿ ಗೌರವಿಸಿದೆ.



ಮೇಧಾ ಕುಲಕರ್ಣಿ ಅವರು ಕನ್ನಡ ವಿಭಾಗದ ಉಪನ್ಯಾಸಕ ಡಾ. ಜಿ.ಎನ್. ಉಪಾಧ್ಯ ಅವರ ಮಾರ್ಗದರ್ಶನದಲ್ಲಿ ಈ ಸಂಪ್ರಬಂಧವನ್ನು ಬರೆದು ಸಾದರಪಡಿಸಿದ್ದರು. ಸಮಕಾಲೀನರಾದ ಕನಕದಾಸ ಮತ್ತು ಏಕನಾಥರ ಜೀವನ ಸಾಧನೆಗಳನ್ನು ಎತ್ತಿ ಹಿಡಿಯುವಲ್ಲಿ ಈ ಸಂಪ್ರಬಂಧ ಯಶಸ್ವಿಯಾಗಿದೆ ಎಂದು ವಿಭಾಗದ ಪ್ರಕಟಣೆ ತಿಳಿಸಿದೆ.

### ವಿಮರ್ಶಕಿ, ಕತೆಗಾರ್ತಿ ಡಾ. ಮಣಿಮಾಲಿನಿ ನಿಧನ

ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥ ವಸಂತಕುಮಾರ್ ತಾಳ್ತಜೆ ಅವರ ಪತ್ನಿ, ಕನ್ನಡದ ಖ್ಯಾತ ವಿಮರ್ಶಕಿ, ಕತೆಗಾರ್ತಿ ಡಾ. ಮಣಿಮಾಲಿನಿ ವಿ.ಕೆ. ಅವರು ಮೆದುಳಿನ ರಕ್ತಸ್ರಾವಕ್ಕೊಳಗಾಗಿ ಜು. 18ರಂದು ಮಂಗಳೂರಿನ ಕೆಎಂಸಿ ಆಸ್ಪತ್ರೆ ನಿಧನ ಹೊಂದಿದರು.


ಮುಂಬಯಿಯ ಸಾಹಿತ್ಯ ರಂಗದಲ್ಲಿ ಚಿರಪರಿಚಿತರಾಗಿದ್ದ ಡಾ. ಮಣಿಮಾಲಿನಿ ಅವರು ಮೃದುಸ್ವಭಾವ, ಸರಳ ನಡೆ-ನುಡಿ ಕನ್ನಡಿಗರ ಅಭಿಮಾನಕ್ಕೆ ಪಾತ್ರರಾಗಿದ್ದರು. ಪ್ರಲೋಭನೆ ಇವರ ವಿಮರ್ಶಾ ಸಂಕಲನ ಕೃತಿ. ಕಥೆಗಳನ್ನು ಬರೆಯುವುದರಲ್ಲಿ ಮತ್ತು ಸಾಹಿತ್ಯ ವಿಮರ್ಶೆಯಲ್ಲಿ ಅವರು ಹೆಚ್ಚಿನ ಆಸಕ್ತಿ ಹೊಂದಿದ್ದರು. ಕನ್ನಡದಲ್ಲಿ ಎಂ.ಎ.,ಪಿಎಚ್‌ಡಿ ಮಾಡಿರುವ ಅವರು ಲೈಬ್ರರಿ ವಿಜ್ಞಾನದಲ್ಲಿ ಎಂ.ಲಿಬ್ ಮಾಡಿದ ಅನಂತರ ಮುಂಬಯಿಯ ಸಾಧನಾ ಶಿಕ್ಷಣ ಕಾಲೇಜಿನಲ್ಲಿ ಕೆಲ ಸಮಯ ಗ್ರಂಥಪಾಲಕಿಯಾಗಿ ಸೇವೆ ಸಲ್ಲಿಸಿದ್ದರು.

ಪತಿ ವಸಂತ ಕುಮಾರ್ ಅವರೊಂದಿಗೆ ಭಾರತ ಮತ್ತು ಜರ್ಮನಿ ಸಾಂಸ್ಕೃತಿಕ ವಿನಿಮಯ ಯೋಜನೆಯಡಿಯಲ್ಲಿ ಅವರು ಜರ್ಮನಿ, ಇಟಲಿ, ಸ್ವಿಜರ್‌ಲ್ಯಾಂಡ್ ಮುಂತಾದೆಡೆಗಳಲ್ಲಿ ಪ್ರವಾಸ ಮಾಡಿ ಸಮಾಲೋಚನಾ ಸಭೆಯಲ್ಲಿ ವಿಚಾರ ಮಂಡನೆ ಮಾಡಿದ್ದರು.

ಮೂಲತಃ ವಿಟ್ಲದ ಕಳಂಜಿಮಲೆಯವರಾಗಿರುವ ಮೃತರು ಪತಿ ವಸಂತ ಕುಮಾರ್ ಅವರನ್ನು ಅಗಲಿದ್ದಾರೆ.

## ಸಂಗೀತ ಒಂದು ಉಪಾಸನೆ - ಮೈಸೂರು ವಿ ಸುಬ್ರಹ್ಮಣ್ಯ

ಬೆಂಗಳೂರು ಗಾಯನ ಸಮಾಜವು ಆಗಸ್ಟ್ 13 ರಿಂದ 20 ರ ವರೆಗೆ ಏರ್ಪಡಿಸಿದ್ದ 38 ನೆಯ ಸಂಗೀತ ಸಮ್ಮೇಳನದಲ್ಲಿ ಅಧ್ಯಕ್ಷಸ್ಥಾನ ವಹಿಸಿದ್ದ ಶ್ರೀ ಮೈಸೂರು ಸುಬ್ರಹ್ಮಣ್ಯನವರು ಸಂಗೀತವು ಜೀವನದ ಒಂದು ಅವಿಭಾಜ್ಯ ಅಂಗ. ಸಂಗೀತವು ಎಂದೂ ಸಹ ಜನ ಸಾಮಾನ್ಯರಿಂದ ಉಳಿದು-ಬೆಳೆದು ಬಂದದು. ಜಾನಪದದಲ್ಲಿ ಆರಾಧನೆಗೆ ಸಂಗೀತವನ್ನು ಅನಾದಿಕಾಲದಿಂದಲೂ ಬಳಸುತ್ತಿದ್ದಾರೆ. ದೈವ ಮತ್ತು ಪ್ರಕೃತಿಗಳನ್ನು ಕುರಿತ ಹಾಡುಗಳು ಎಲ್ಲ ಸಂಸ್ಕೃತಿಗಳಲ್ಲೂ ಕಾಣಬಹುದು. ಭಾರತೀಯ ಸಂಸ್ಕೃತಿಯಲ್ಲಿ ಸಂಗೀತಕ್ಕೆ ಮೇರು ಸ್ಥಾನ. ಲಲಿತ ಕಲೆಗಳಲ್ಲಿ ಸಂಗೀತವೇ ಹೆಚ್ಚು



ಜನಪ್ರಿಯ. ನಾದಮೋಡಿಗೆ ಸೋಲದವರು ಯಾರು? ಎಂದು ಹೇಳಿದರು.

ಸಂಗೀತವು ಮನುಷ್ಯರನ್ನು ನಾಗರೀಕರನ್ನಾಗಿ ಮಾಡುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಮಕ್ಕಳಿಗೆ ಸಂಗೀತ ಶಿಕ್ಷಣದಿಂದ ಪ್ರಾಪ್ತವಾಗುವ ಗುಣಗಳು ಅಪರಿಮಿತ. ಸಂಗೀತದ ಒಲವು ಜನರಲ್ಲಿ ಕ್ರೌರ್ಯವನ್ನು ಕರಗಿಸಿ ಮನುಷ್ಯತ್ವವನ್ನು ಬೆಳೆಸುತ್ತದೆ. ಮಕ್ಕಳ ಅಭಿರುಚಿ, ಆಸಕ್ತಿ ಹಾಗೂ ಅನುಕೂಲಗಳನ್ನು ಪರಿಶೀಲಿಸಿ ಹಾಡುಗಾರಿಕೆ, ವಾದ್ಯ ಸಂಗೀತಗಳಲ್ಲಿ ಶಿಕ್ಷಣ ನೀಡಬೇಕು. ಒಂದು ಹಂತ ದಾಟಿದ ಈ ನಾದ ಪಸಿಗಳಿಗೆ ಸಂಗೀತದಲ್ಲಿ ಪ್ರಾವೀಣ್ಯತೆ ಪಡೆಯುವಂಥಹ ಶಿಕ್ಷಣ ನೀಡ ಬಹುದು. ಇದರಿಂದ ಎಲ್ಲಾ ಮಕ್ಕಳ್ಗೆ ನಾದ ಶಕ್ತಿಯ ಸಂಚಯನ ವಾಗುವುದಲ್ಲದೇ ಪ್ರತಿಭಾವಂತರಿಗೆ ಪ್ರೌಢ ಶಿಕ್ಷಣ ದೊರೆಯುವುದು. ಜಾತಿ, ಹಣ, ಭಾಷೆ, ಇವ್ಯಾವುಗಳ ನಿರ್ಬಂಧವಿಲ್ಲದೆ ಆಸಕ್ತರೆಲ್ಲರಿಗೂ ಸಂಗೀತ ಕಲಿಯಲು ಮುಕ್ತ ಅವಕಾಶ ಕಪಿಸಬೇಕು. ಈ ಎಲ್ಲ ಅಭಿಪ್ರಾಯಗಳನ್ನೂ ನೃತ್ಯಕ್ಕೂ ಅನ್ವಯಿಸಬಹುದು.

ಸಾಮೂಹಿಕ ಶಿಕ್ಷಣಕ್ಕಿಂತ ವ್ಯಕ್ತಿಗತ ಸಂಗೀತ ಶಿಕ್ಷಣವೇ ಹೆಚ್ಚು ಜನಪ್ರಿಯ. ಬಹುಶಃ ಈ ಕಾರಣದಿಂದಲೇ ರಾಜ್ಯದಲ್ಲಿ ಕೆಲ ಸಂಗೀತ ಕಾಲೇಜುಗಳು ವಿದ್ಯಾರ್ಥಿಗಳಿಲ್ಲದೆ ಸೊರಗುತ್ತಿರುವುದು. ಕೆಲವು ಕಾಲೇಜುಗಳಲ್ಲಂತೂ ವಿದ್ಯಾರ್ಥಿಗಳಿಗಿಂತ ಬೋಧಕರೇ ಹೆಚ್ಚು. ವಿಶೇಷ ಪರಿಣತಿಯುಳ್ಳ ಕಲಾವಿದರನ್ನು guest teacher ಆಗಿ ಆಹ್ವಾನಿಸಿ ಜ್ಞಾನಾರ್ಜನೆಗೆ ಒತ್ತಾಸೆ ನೀಡಬೇಕು. ಸಂಗೀತ ಶಿಕ್ಷಕರಿಗೇ ಶಿಕ್ಷಣದ ಆವಶ್ಯಕತೆ ಇದೆ. ಟಿ.ಸಿ.ಹೆಚ್, ಬಿ.ಎಡ್ ಗಳಂತೆ ಸಂಗೀತ ಶಿಕ್ಷಕರನ್ನು ಸಿದ್ಧಗೊಳಿಸುವ ಶೈಕ್ಷಣಿಕ ಸಂಸ್ಥೆಯೊಂದನ್ನು ಕರ್ನಾಟಕ ಸರ್ಕಾರವು ಸ್ಥಾಪಿಸಬಹು.

ಶ್ರೋತೃಗಳನ್ನು ಅರ್ಥಮಾಡಿಕೊಂಡು ಸಂತೋಷಗೊಳಿಸುವುದೇ ಒಂದು ಕಲೆ. ಕಲಾವಿದರು ತಮ್ಮ ವಿದ್ವತ್ತು ಪ್ರತಿಭೆ ಮತ್ತು ಅನುಭವಗಳನ್ನು ಉಪಯೋಗಿಸಿ ಕಲಾಭಿಮಾನಿಗಳನ್ನು ಸಂತೋಷಗೊಳಿಸಲು ಪ್ರಾಮಾಣಿಕವಾಗಿ ಪ್ರಯತ್ನ ಮಾಡಬೇಕು. ಕಲೆಗಳ ಉಳಿವು ಬೆಳೆವಿಗೆ ಪತ್ರಿಕೆ-ವಿಮರ್ಶಕರ ಪಾತ್ರವೂ ಮುಖ್ಯವಾದುದೇ. ವಿಮರ್ಶಕನು ವ್ಯಕ್ತಿ ನಿಷ್ಠ ನಲ್ಲ ವಿಷಯ ಕಲಾ ನಿಷ್ಠ ಎಂಬುದನ್ನು ಕಲಾವಿದರು ಮರೆಯಬಾರದು. ದಿನಪತ್ರಿಕೆಗಳಲ್ಲಿ ವಿಸ್ತಾರವಾದ ವಿಮರ್ಶೆಗಳಿಗೆ ಬೇಕಾದ ಸ್ಥಳವಿರುವಿದಿಲ್ಲ ಕಲೆಗಳಿಗೇ ಮೀಸಲಾದ ಪತ್ರಿಕೆಗಳು ಅಗತ್ಯ, ಇವಲ್ಲಿ ತಾಂತ್ರಿಕ ಅಂಶಗಳನ್ನೊಳಗೊಂಡ ವಸ್ತು ನಿಷ್ಠ ವಿಷಯಗಳನ್ನು ಚರ್ಚಿಸಬಹುದು. ಈ ನಿಟ್ಟಿನಲ್ಲಿ ಕಲಾವಿದರು, ಸಭೆಗಳು ಕಾರ್ಯೋನ್ಮುಖರಾಗಬೇಕು, ಇತ್ಯಾದಿಯಾಗಿ ಕಲಾವಿದರಿಗೆ ಎದಿರಾಗುವ ಅನೇಕ ಸಮಸ್ಯೆಗಳಬಗ್ಗೆ ಸುಬ್ರಹ್ಮಣ್ಯನವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಗಮನ ಸೆಳೆದರು.

ಗಾಯನ ಸಮಾಜವು ಕಲಾಜಗತ್ತಿನಲ್ಲಿ ಉನ್ನತ ಸೇವೆ ಸಲ್ಲಿಸಿದವರನ್ನು ಗೌರವಿಸುತ್ತದೆ. ಕೊನೆಯದಿನ, ಆಗಸ್ಟ್ 20 ರಂದು, ಗಾಯನ ಸಮಾಜವು ಮೈಸೂರು ಸುಬ್ರಹ್ಮಣ್ಯನವರಿಗೆ, ಸಂಗೀತ ಕಲಾರತ್ನ ಎಂಬ ಬಿರುದನ್ನು ಕೊಟ್ಟು ಸನ್ಮಾನಿಸಿತು. ಕಳೆದ 30 ವರ್ಷಗಳಿಂದ ಕಲಾವಿದರಾಗಿ, ಕಲಾ ವಿಮರ್ಶಕರಾಗಿ, ಸಂಘಟಕರಾಗಿ ಸುಬ್ರಹ್ಮಣ್ಯನವರು ಕಲಾಜಗತ್ತಿಗೆ ಅಪಾರ ಸೇವೆ ಸಲ್ಲಿಸಿದ್ದಾರೆ. ಇದನ್ನು ಪರಿಗಣಿಸಿಯೇ ಅವರಿಗೆ ಈ ಸನ್ಮಾನವನ್ನು ಮಾಡಲಾಯಿತು. ಪೇಜಾವರ ಮಠದ ಸ್ವಾಮಿಗಳಾದ ಶ್ರೀ ವಿಶ್ವೇಶತೀರ್ಥರು ಸನ್ಮಾನವನ್ನು ಮಾಡಿದರು. ಸನ್ಮಾನವನ್ನು ಸ್ವೀಕರಿಸಿದ ಸುಬ್ರಹ್ಮಣ್ಯನವರು ಶಾಸ್ತ್ರೀಯ ಸಂಗೀತದ ಕ್ಷೇತ್ರದಲ್ಲಿ ಇಂದು ಮೊದಲಿಗಿಂತ ಹೆಚ್ಚು ಪ್ರಗತಿಯನ್ನು ಕಾಣಬಹುದು. ಇಂದಿನ ಕಲಾವಿದರಿಗೆ ಹೆಚ್ಚು ಹೆಚ್ಚಿನ ಅವಕಾಶಗಳು ದೊರೆಯುತ್ತಿವೆ. ಅವರು ಹೆಚ್ಚು ಹೆಚ್ಚಿನ ಸಾಧನೆಗಳನ್ನು ದಾಖಲಿಸಿದ್ದಾರೆ ಎಂದರು.

- ಪ್ರಸಾದ್

## ಕನ್ನಡ ವಿಭಾಗದ ಶ್ರದ್ಧಾಂಜಲಿ

ಇತ್ತೀಚೆಗೆ ನಿಧನರಾದ ಕನ್ನಡದ ಹಿರಿಯ ವಿದ್ವಾಂಸ, ಲೇಖಕ ವಿದ್ವಾನ್ ರಾಮಚಂದ್ರ ಉಚ್ಚಿಲ್ ಹಾಗೂ ಕತೆಗಾರ್ತಿ, ಲೇಖಕಿ ಡಾ. ಮಣಿಮಾಲಿನಿ ಅವರಿಗೆ ಮುಂಬೈ ವಿಶ್ವವಿದ್ಯಾಲಯ ಕನ್ನಡವಿಭಾಗದಲ್ಲಿ ಇತ್ತೀಚೆಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ಇಬ್ಬರು ಮಹನೀಯರು ತಮ್ಮ ಬರವಣಿಗೆ ಹಾಗೂ ಸರಳ ನಡೆನುಡಿಯ ಮೂಲಕ ಮುಂಬಯಿ ಕನ್ನಡಿಗರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಇವರ ನಿಧನದಿಂದ ತುಂಬಲಾರದ ಶೂನ್ಯವೊಂದು ಸೃಷ್ಟಿಯಾಗಿದೆ ಎಂದು ವಿಭಾಗದ ಶೋಕ ಸಂದೇಶದಲ್ಲಿ ತಿಳಿಸಲಾಗಿದೆ. ರಾಮಚಂದ್ರ ಉಚ್ಚಿಲ್ ಹಾಗೂ ಡಾ. ಮಣಿಮಾಲಿನಿ ಅವರ ನಿಧನಕ್ಕೆ ಡಾ. ಜಿ.ಎನ್. ಉಪಾಧ್ಯ, ಡಾ. ರಘುನಾಥ್, ಡಾ. ವಿಶ್ವನಾಥ ಕಾರ್ನಾಡ್, ಶಿವರಾಮ ಶೋಭಾ ಕೋಟ್ಯಾನ್, ಪ್ರಾ. ರಾಮ್ನಾರಾಯಣ ಐಲ್, ಎಚ್.ಬಿ.ಎಲ್. ರಾವ್ ಮೊದಲಾದವರು ದುಃಖ ವ್ಯಕ್ತ ಪಡಿಸಿದ್ದಾರೆ.

## ಅಗಲಿಕೆ

ವಿ. ಕೆ. ಮಣಿಮಾಲಿನಿಯವರು ಆಗಸ್ಟ್ 18 ರಂದು ನಮ್ಮಿಂದ ದೂರವಾದರೆಂದು ತಿಳಿಸಲು ವಿಷಾದಿಸುತ್ತೇವೆ.



ಸೌಮ್ಯ ಸ್ವಭಾವದ ಮಣಿಮಾಲಿನಿಯವರಿಗೆ ಅನೇಕ ವಿಷಯಗಳ ಬಗ್ಗೆ ದಿಟ್ಟವಾದ ನಿಲುವು. ಅವರ ನಿಲುವನ್ನು ಸ್ಪಷ್ಟವಾಗಿ, ಸರಳವಾಗಿ ತಿಳಿಸುವ ಬರಹದ ಶೈಲಿಯು ಅವರ ಲೇಖನಗಳ ವೈಶಿಷ್ಟ್ಯವಾಗಿದ್ದಿತು. 1996 ರಲ್ಲಿ ಮಣಿಮಾಲಿನಿಯವರು ಮುಂಬೈ ವಿ.ವಿ. ಯಿಂದ ಪಿಎಚ್. ಡಿ. ಪದವಿಯನು ಪಡೆದರು. ಇವರು ತಮ್ಮ ಪಿಎಚ್. ಡಿ. ಅಧ್ಯಯನಕ್ಕೆ ಮಂಡಿಸಿದ ಪ್ರಬಂಧ ದ್ರೌಪದೀ ಸಮೀಕ್ಷೆ ಯು ಅನೇಕರ ಮೆಚ್ಚುಗೆಯನ್ನು ಪಡೆದ ಒಂದು ಉತ್ತಮ ಕೃತಿ. ಇದನ್ನು ಅದೇ ವರ್ಷ ವಿ.ವಿ. ಯು ಪುಸ್ತಕ ರೂಪದಲ್ಲಿ ಹೊರತಂದಿತು.

ಮಣಿಮಾಲಿನಿಯವರು ಮುಂಬೈ ವಿ.ವಿ.ಯ ಕನ್ನಡ ವಿಭಾಗದ ಮುಖ್ಯಸ್ಥರಾದ ತಾಳ್ತಜೆ ವಸಂತ ಕುಮಾರರನ್ನು ಮದುವೆಯಾದರು. ಇವರು ಮುಂಬಯಿನ ಸಾರಸ್ವತ ಮತ್ತು ಸಾಂಸ್ಕೃತಿಕ ಜಗತ್ತಿನಲ್ಲಿ ಎಲ್ಲರಿಗೂ ಪರಿಚಯವಾದ, ಪ್ರಿಯರಾದ ಜೋಡಿ. ಅಸೋಸಿಯೇಷನಿನ ಸದಸ್ಯರು ಮತ್ತು ಹಿತೈಷಿಗಳು. ಅಸೋಸಿಯೇಷನ್ನಿನಲ್ಲಿ ಮತ್ತು ಮುಂಬೈಯಿನ ಇತರ ಕನ್ನಡ ಸಂಘಗಳಲ್ಲಿ ಇವರಿಗೆ ಅನೇಕ ಮಿತ್ರರಿದ್ದರು. ಅವರೆಲ್ಲರಿಗೂ ಮತ್ತು ಕನ್ನಡ ಸಾಹಿತ್ಯ ಜಗತ್ತಿಗೂ, ಮಣಿಮಾಲಿನಿಯವರ ಅಗಲಿಕೆಯಿಂದ ತುಂಬಲಾರದ ನಷ್ಟವಾಗಿದೆ. ಈ ಸಮಯದಲ್ಲಿ ನಮ್ಮೆಲ್ಲರ ಮನಸ್ಸಿನಲ್ಲೂ ವಸಂತ ಕುಮಾರ ಬಗ್ಗೆಯೇ ಯೋಚನೆ. ಈ ಅಪಾರ ದುಃಖವನ್ನು ತಾಳಲು ದೇವರು ಅವರಿಗೆ ಶಕ್ತಿ ಕೊಡಲಿ ಎಂದು ನೇಸರು ಪ್ರಾರ್ಥಿಸುತ್ತದೆ.

---

## ಮುಂಬಯಿ ಕನ್ನಡ ಸಂಘದಲ್ಲಿ ಶ್ರೀ ಗಣೇಶೋತ್ಸವ

ದಿನಾಂಕ 27-8-2006ರಿಂದ 30-8-2006ರ ವರೆಗೆ ನಡೆದ ಶ್ರೀ ಗಣೇಶೋತ್ಸವದ ಅಂಗವಾಗಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಮೊದಲನೇ ದಿನ ಸತ್ಯಧ್ಯಾನ ವಿದ್ಯಾಪೀಠದ ವಿದ್ವಾಂಸರಾದ ವೇ॥ ಬ್ರ ॥ ಶ್ರೀ॥ ನರಸಿಂಹಾಚಾರ್ಯ ಅವರಿಂದ ವೇದ ಘೋಷ ನಡೆಯಿತು. ಎರಡನೇ ದಿನದ ಕನ್ನಡ ಸರ್ಟಿಫಿಕೇಟ್ ಕೋರ್ಸಿನ ವಿದ್ಯಾರ್ಥಿ ವೃಂದದಿಂದ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಅಶ್ವಿನಿ ಭಟ್ ಹರಿಕೀರ್ತನೆಯನ್ನು ನಡೆಸಿಕೊಟ್ಟರು. ಮಂಗಳಾ ಕುಲಕರ್ಣಿಯವರು ಆರೋಗ್ಯದ ಬಗ್ಗೆ ಉಪನ್ಯಾಸ ಮತ್ತು ಭಜನೆ ಹಾಡಿದರು. ಪ್ರೀತಿ ಕಾಮತ್ ಭಕ್ತಿ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿದರು. ಶ್ರೀಮತಿ ತ್ರಾಸಿ ಹಾರ್ಮೋನಿಯಂ ಹಾಗೂ ಗಾಯನದಲ್ಲಿ, ಶ್ರೀ ಗಣೇಶ್ ತಬಲಾದಲ್ಲಿ ಸಹಕರಿಸಿದರು. ಡಾ. ಪಾಟೀಲ್ ಕಾರ್ಯಕ್ರಮ ನಿರ್ವಹಣೆ ಮಾಡಿದರು. ಮೂರನೇ ದಿನ ಸಂಘದ ಮಹಿಳಾ ವಿಭಾಗದವರು ಏರ್ಪಡಿಸಿದ್ದ ಭಕ್ತಿಗೀತೆ ಗಾಯನ ಕಾರ್ಯಕ್ರಮದಲ್ಲಿ ವಿದ್ವಾನ್ ಟಿ.ಎನ್. ಅಶೋಕ್, ಶ್ರೀಮತಿ ದುರ್ಗಾಲಕ್ಷ್ಮಿ, ವೆಂಕಟೇಶ್ ಪೈ, ಗಾಯನ ಮಾಡಿದರು. ನಾಲ್ಕನೇ ದಿನದ ಕಾರ್ಯಕ್ರಮದಲ್ಲಿ ಡೊಂಬಿವಲಿ ಮೈಸೂರು ಸಂಗೀತ ವಿದ್ಯಾಲಯದ ವಿದ್ಯಾರ್ಥಿನಿಯರಾದ ಕುಮಾರಿ ದರ್ಶನ, ದಿವ್ಯ, ನಂದಿನಿ ಮತ್ತು ಸ್ನೇಹಾರವರು ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ನಡೆಸಿಕೊಟ್ಟರು. ಕರ್ನಾಟಕ ಸರಕಾರದ ಸಂಗೀತ ಪರೀಕ್ಷೆಗಳಲ್ಲಿ ಉತ್ತಮ ಶ್ರೇಯಾಂಕದೊಂದಿಗೆ ಇದೇ ವರ್ಷ ತೇರ್ಗಡೆಯಾಗಿರುವ ಈ ವಿದ್ಯಾರ್ಥಿನಿಯರು, ಶ್ರೀ ಪುರಂದರದಾಸರ, ಶ್ರೀ ತ್ಯಾಗರಾಜರ ಕೃತಿಗಳನ್ನು ಸುಶ್ರಾವ್ಯವಾಗಿ ಹಾಡಿದರು. ರಸಿಕರ ಅಪೇಕ್ಷೆ ಮೇರೆ ಶ್ರೀ ಗಣಪತಿಯ ಮೇಲೆ ರಚಿಸಿದ ಇಂಗ್ಲೀಷ್ ಗೀತೆಯೊಂದನ್ನು ಸ್ವರ ಸಂಯೋಜನೆಯೊಂದಿಗೆ ಹಾಡಿ ಸಭಿಕರೆಲ್ಲರ ಮೆಚ್ಚುಗೆ ಪಡೆದರು. ಪಕ್ಕ ವಾದ್ಯದಲ್ಲಿ ಕುಮಾರಿ ಅರುಣ ಪಿಟೀಲು, ದೇವಾನಂದ ತಬಲದಲ್ಲಿ ಉತ್ತಮವಾಗಿ ಸಹಕರಿಸಿ ಕಿರಿಯ ಕಲಾವಿದರಿಗೆ ನೆರವನ್ನಿತ್ತರು.

ವೇದಮೂರ್ತಿ, ಅಚ್ಯುತ ಭಟ್ ಮತ್ತು ಸಂಜೀವ ಸಾಂಗ್ಲಿ, ನರಸಿಂಹ ಭಟ್‌ರವರಿಂದ ವೇದಘೋಷ ನಡೆಯಿತು. ವಿಸರ್ಜನೆಯಾದ ನಂತರ ಮಹಾಪ್ರಸಾದ ವಿನಿಯೋಗವಾಯಿತು.

ಈ ಕಾರ್ಯಕ್ರಮಕ್ಕೆ ಸಂಘದ ಅಧ್ಯಕ್ಷ ಜಿ. ಎಸ್. ನಾಯಕ್ ಮತ್ತು ಕಾರ್ಯದರ್ಶಿ ನಾಗಭೂಷಣ್ ಬಿ. ಹಾಗೂ ಕಾರ್ಯಕಾರಿ ಸಮಿತಿಯವರು ಬಹಳ ಶ್ರಮಿಸಿದ್ದರು. ಕಾರ್ಯಕ್ರಮದ ನಿರ್ವಹಣೆಯನ್ನು ಸಂಘದ ಜಂಟಿ ಕಾರ್ಯದರ್ಶಿ ಸೋಮನಾಥ ಕರ್ಕೇರ ಮಾಡಿದರು.

## ನನ್ನೊಳಗೆ ನಾನು !

ಬಹುತೇಕ ಮಹಿಳೆಯರಿಗೆ
ಬೇಕು ಸೀರೆ - ಹೊನ್ನು
ಲೇಖಕಿಯಾದ ನನಗೆ
ಸಾಕು ಬರೇ ಬಾಲ್ ಪೆನ್ನು !
ಸಾಹಿತ್ಯ ಕ್ಷೇತ್ರದಿ
ನಾನೊಬ್ಬ ಏಕ ಲವ್ಯ.
ಇಲ್ಲ ಯಾವ ಗುರು !
ದ್ರೋಣಾಚಾರ್ಯ ಬೇಡಿದರೂ
ನಾ ಕೊಡಲಾರೆ ಹೆಬ್ಬೆರಳು !
ಹನಿಮೂನ್, ಗಂಡನೊಂದಿಗೆ
ಸರಸ - ತಿರುಗಾಟವಿಲ್ಲ
ಇಲ್ಲ ಬಿಡಿ ಚಿಂತೆ
ಇದ್ದಾನಲ್ಲ ಕಾವ್ಯ ಪ್ರಿಯಕರ ?!
ಮುಂಗಾರು ಮಳೆ
ಶ್ರಾವಣ ಹಸಿರು
ಶರತ್‌ಋತು ಮೇಘ-
ಸೊಬಗು; ಪಕ್ಷಿ - ಸಂಕುಲ
ನೋಡಿ ಬರೆಯೋ ಹಂಬಲ
ಕವಿತೆ ಮೂಡಿದಾಗ ಸಮಾಧಾನ !
ಇಲ್ಲ ನನ್ನಲ್ಲಿ ಸೀರೆ - ಒಡವೆ,
ನಗದು ಹಣ
ಅಂಚೆ ಚೀಟಿಗೂ ತತ್ವಾರ
ಆದರೂ... ಎರಡು ಸಾವಿರ
ಬರೆಹ ಪ್ರಕಟಿಸಿದ
ನನ್ನೊಳಗೆ ನಾ ಬಲು ಶ್ರೀಮಂತೆ !

\- ಶೋಭಾ ಪ್ರಮೋದ್

MH/MR/ME/093/06-08
Date of Posting : 10-09-2006


# MYSORE SALES INTERNATIONAL LIMITED (MSIL)

*FOR EVERY OCCASION...*

## CORDIALLY INVITES YOU TO AN EXHIBITION CUM SALE OF

**MYSORE SILK PURE ZARI SAREES FROM KSIC & PRINTED CREPE, GEORGETTE, CHIFFON, SOFT SILK, MONGA SILK SAREES, SCARVES, STOLES, TIES, SHAWLS, SILK SHIRTS & COTTON SHIRTS.**

**AT**

**THE MYSORE ASSOCIATION**

**393, BHAUDAJI ROAD, MATUNGA, MUMBAI-19**

**FROM 23rd SEP. 2006 TO 2nd OCT. 2006**

**FESTIVAL SPECIAL DISCOUNT UPTO 30%**

**ON FRESH STOCKS EXCLUSIVELY FOR THIS EXHIBITION**

**✦ AT ✦**

No. 3, World Trade Centre
Cuffe Parade, Colaba
Mumbai-400 005
Tel. : 2218 1658

Arun Chambers
Tardeo Main Road,
Mumbai-400 034
Tel. : 23516263
Telefax : 23521304


Edited, Printed & Published by M.A.N. Prasad, On behalf of the Mysore Association, Mumbai. Tel.: 2402 4647 ● Fax : 2401 0574
Email : karunadu@bom5.vsnl.net.in
Printed at Aarati Art Printers, Fort, Mumbai-400 001. * 2266 3361 / 2266 5938